# ಸರ್ಚ್ ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆ (ರಿ).
## ಬಾಗಲಕೋಟೆ

"ನಡೆದುಬಂದ ದಾರಿಯ ಒಂದು ಅವಲೋಕನ

# 25ರ ಸಂಭ್ರಮದಲ್ಲಿ

## ಹೊಸ ಸಾಧನೆಗಳ ಮಜಲುಗಳತ್ತ"


ಅಧ್ಯಕ್ಷರು
ಶ್ರೀ ಉಮಾರಾಮ ಏ ಜೇರೆ

ಉಪಾಧ್ಯಕ್ಷರು
ಡಾ.ಶ್ರೀ ಮಾಹಾದೇವ ದಿಕ್ಷೀತ

ನಿರ್ದೇಶಕರು
ಶ್ರೀ ವೆಂಕಟೇಶ ಎಂ.

ಆಡಳಿತ ಮಂಡಳಿ ಸದಸ್ಯರು
ಡಾ.ಶ್ರೀಮತಿ ಮಂಜುಳಾ ಜೋಶಿ

ವಿಳಾಸ: ಸರ್ಚ್ ಸ್ವಯಂ ಸೇವಾ ಸಂಸ್ಥೆ (ರಿ)
ಸೆಕ್ಟರ ನಂ. 50 ಪ್ಲಾಟ್ ನಂ ಡಿ 6 ನವನಗರ, ಬಾಗಲಕೋಟೆ-587103
ತಾ/ ಬಾಗಲಕೋಟೆ ಜಿಲ್ಲಾ ಬಾಗಲಕೋಟೆ ರಾಜ್ಯ ಕರ್ನಾಟಕ
E-mail : kmtsearch01@gmail.com Website : http://serach.1ngo.in/
ದೂರವಾಣಿ ಸಂಖ್ಯೆ : 9448801473,7022949641, 9980268917.


Scanned by PDF Scanner



Scanned by PDF Scanner



## ಮುನ್ನುಡಿ

ನಮ್ಮ ಸರ್ಚ್ ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆಯು 25ನೇ ವಾರ್ಷಿಕ ವರದಿಯ ಪುಸ್ತಕವನ್ನು ತಮ್ಮ ಕೈಗಿಡಲು ಸಂತೋಷ ಅನಿಸುತ್ತದೆ.

ಸರ್ಚ್ ಸಂಸ್ಥೆಯು ಗ್ರಾಮೀಣ ಮಕ್ಕಳ ಮತ್ತು ಮಹಿಳೆಯರ ಸಬಲೀಕರಣವನ್ನು ಗುರಿಯಾಗಿಟ್ಟುಕೊಂಡು ಈ ನಿಟ್ಟಿನಲ್ಲಿ ಸಮರ್ಪಿಸಿಕೊಂಡಿರುವ ಸಂಸ್ಥೆ., ಕಳೆದ ಕೆಲ ವರ್ಷಗಳಿಂದ ಅನಾಥಮಕ್ಕಳ ದತ್ತು ಕೇಂದ್ರ ವಿಕಲಚೇತನರ ಉದ್ಯೋಗವಕಾಶಗಳ ಕ್ಷೇತ್ರದಲ್ಲಿ ವಿಕಲ ಚೇತನರಿಗೆ ಜಾಗೃತಿ ಮೂಡಿಸಿ ಪ್ರಾರಂಭಿಕ ತರಬೇತಿಯನ್ನೊದಗಿಸುವ ಪ್ರಯತ್ನ ಮಾಡುತ್ತಿದೆ. ಹಿಂದಿನ ಎರಡು ವರ್ಷಗಳಲ್ಲಿ ನಮ್ಮ ಜಿಲ್ಲೆಯ 880 ವಿಕಲಚೇತನ ಯುವಕರು ಮತ್ತು ಯುವತಿಯರಿಗೆ ತರಬೇತಿ ಹೊಂದಿದ್ದಾರೆ. 650 ರಷ್ಟು ಜನ ಉದ್ಯೋಗ ದೊರಕಿಸಿಕೊಂಡು ನಮ್ಮ ಜಿಲ್ಲೆಯ ಉಳಿದ ವಿಕಲಚೇತನ ಯುವಕ/ಯುವತಿಯರಿಗೆ ಆಶಾಕಿರಣವಾಗಿದ್ದಾರೆ.

ಸಂಸ್ಥೆಯು ಮುಂದಿನ ದಿನಗಳಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ತೊಡಗಿಸಿಕೊಂಡು ವಿಕಲಚೇತನ ಯುವಕ/ಯುವತಿಯರ ಭವಿಷ್ಯ ಗರಿಗೆದರುವಂತೆ ಬೇರೆ ಬೇರೆ ರಂಗಗಳಲ್ಲಿ ಸ್ವಯಂ ಉದ್ಯೋಗ ದೊರಕಿಸುವ ತರಬೇತಿ ನೀಡಲಿದೆ.

ಈ ಎಲ್ಲಾ ಚಟುವಟಿಕೆಗಳ ಹಿಂದೆ ನನ್ನ ಜೊತೆ ಇರುವ ಎಲ್ಲಾ ರೂಪರೇಷವನ್ನು ನಿರ್ಧರಿಸುವಿಕೆಯಲ್ಲಿ ನಿರ್ದೇಶಕರ ಶ್ರಮವಿದೆ. ನಮ್ಮ ನಿರ್ದೇಶಕರ ಮಂಡಳಿಯ ನಿರ್ದೇಶನಗಳನ್ನು ಜಾರಿಗೋಳಿಸಲು ನಿತಂತರ ಶ್ರಮಿಸುತ್ತಿರುವ ಕಾರ್ಯದರ್ಶಿಗಳಾದ ಶ್ರೀ ವೇಂಕಟೇಶ ಮತ್ತು ಸಹನಿರ್ದೇಶಕಿ ಶ್ರೀಮತಿ ಮಂಜುಳಾ ಜೋಷಿಯವರ ಶ್ರಮ ಅಪಾರ ಹಾಗೂ ಕಾರ್ಯಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಯಕರ್ತರ ಪರಿಶ್ರಮವನ್ನು ಶ್ಲ್ಯಾಘಿಸುತ್ತೇನೆ.

ಈ ಹೊತ್ತಿನಲ್ಲಿ ಸರ್ಚ್ ಸಂಸ್ಥೆಯ ಅಭಿವೃದ್ಧಿಗಾಗಿ ಕೈಜೊಡಿಸಿರುವ ಧ್ವನಿ ಫೌಂಡೇಶನ್, ಬೇಂಗಳೂರು, ರೋಟರಿ ಮತ್ತು ಇನ್ನರ್ ವ್ಹೀಲ್ ಕ್ಲಬ್ ಬಾಗಲಕೋಟೆ ಅಲ್ಲದೆ ನಮ್ಮ ಸಂಸ್ಥೆಗೆ ಕೈಜೊಡಿಸಿರುವ ದಾನಿಗಳಾದ ಎ.ಪಿ.ಡಿ. ಸಂಸ್ಥೆ ಬೆಂಗಳೂರು ಮತ್ತು ಇತರೆ ಎಲ್ಲಾ ದಾನಿಗಳನ್ನು ಸರಕಾರಿ ಕಛೇರಿಯ ಸಿಬ್ಬಂದಿಯವರನ್ನು ನೆನೆಯುತ್ತೇನೆ. ಮುಂಬರುವ ವರ್ಷಗಳಲ್ಲಿ ಸಾಮಾಜಿಕ ಕಳಕಳಿಯ ಶಕ್ತಿಗಳು ಇನ್ನಷ್ಟು ಹೆಚ್ಚಾಗಲಿ, ಸರ್ಚ ಸಾಮಾಜಿಕ ಕಾರ್ಯ ತಮ್ಮೆಲ್ಲರ ಸಲಹೆ, ಸೂಚನೆ ಮಾರ್ಗದರ್ಶನಗಳೊಂದಿಗೆ ಹೊಂಬೆಳಕಿನ ನಾಳೆಗಳನ್ನು ನೋಡೋಣ ಎಂದು ಆಶಿಸುತ್ತೇನೆ.

ಧನ್ಯವಾದಗಳೊಂದಿಗೆ

ಶ್ರೀಯುತ ಉಮಾರಾಮ ಜೇರೆ
ಅಧ್ಯಕ್ಷರು ಸರ್ಚ ಸ್ವಯಂ ಸೇವಾ ಅಭೀವೃದ್ದಿ ಸಂಸ್ಥೆ (ರಿ)
ನವನಗರ–ಬಾಗಲಕೋಟ



Scanned by PDF Scanner



## ನಿರ್ದೇಶಕರ ನುಡಿ

ಸಂಸ್ಥೆಯ 25ನೇ ವಾರ್ಷಿಕ ವರದಿಯ ಪುಸ್ತಿಕೆಯನ್ನು ತಮ್ಮ ಕೈಗಿಡಲು ತುಂಬಾ ಹರ್ಷವಾಗುತ್ತಿದೆ. ಸರ್ಚ ಸಂಸ್ಥೆ ಗ್ರಾಮೀಣ ಹಾಗೂ ನಗರ ಪ್ರದೇಶದ ಮಕ್ಕಳ ಮತ್ತು ಮಹಿಳೆಯರ ಸಬಲೀಕರಣವನ್ನು ಗುರಿಯಾಗಿಟ್ಟುಕೊಂಡು ಈ ನಿಟ್ಟಿನಲ್ಲಿ ಸಮರ್ಪಿಸಿಕೊಂಡಿರುವ ಸಂಸ್ಥೆಯಾಗಿದೆ. ಕಳೆದ 25 ವರ್ಷಗಳಿಂದ ಶಾಲೆಯಿಂದ ಹೊರಗುಳಿದ ಮಕ್ಕಳು, ಬಾಲಕಾರ್ಮಿಕ ಮಕ್ಕಳು, ಅನಾಥ ಮಕ್ಕಳ ದತ್ತು ಕೇಂದ್ರ, ವಿಕಲಚೇತನರಿಗೆ ಜಾಗೃತಿ ಮೂಡಿಸಿ ನಮ್ಮ ಜಿಲ್ಲೆಯಲ್ಲಿ 1850 ಜನ ವಿಕಲಚೇತನರನ್ನು ಗುರುತಿಸಿ ಅದರಲ್ಲಿ 1200 ಜನರಿಗೆ ತರಬೇತಿ ನೀಡಿ 860 ಜನರಿಗೆ ಉದ್ಯೋಗದಲ್ಲಿ ತೊಡಗಿಸಲಾಗಿದೆ. ಅದೇ ರೀತಿ 4000 ಸ್ವ ಸಹಾಯ ಸಂಘಗಳನ್ನು ರಚಿಸಿ ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿ ಕುಟುಂಬ ಹಾಗೂ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಕೆಲಸ ಮಾಡಿ 78000 ಕುಟುಂಬಗಳು ಸದರಿ ಕಾರ್ಯಕ್ರಮದ ಪ್ರಯೋಜನೆ ಪಡೆದಿರುತ್ತಾರೆ. ಸಂಸ್ಥೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಹಕರಿಸಿದ ಮತ್ತು ಮಾರ್ಗದರ್ಶನ ನೀಡಿದಂತ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಸರ್ಕಾರದ ಇಲಾಖೆ ಅಧಿಕಾರಿಗಳು ದಾನಿ ಸಂಸ್ಥೆಯವರು ಇತರೆ ವೈಯಕ್ತಿಕ ದಾನಿಗಳು ಸಂಸ್ಥೆಯ ಸಂಸ್ಥಾಪಕ ಸದಸ್ಯರು ಹಾಗೂ ಸಹನಿರ್ದೇಶಕರಾದ ಶ್ರೀಮತಿ ಮಂಜುಳಾ ವೆಂಕಟೇಶ ಮತ್ತು ಸಂಸ್ಥೆಯ ಕಾರ್ಯಕರ್ತರನ್ನು ಶ್ಲಾಘಿಸುತ್ತೇನೆ ಮತ್ತು ಮುಂಬರುವ ವರ್ಷಗಳಲ್ಲಿ ಸಾಮಾಜಿಕ ಕಳಕಳಿಯ ವ್ಯಕ್ತಿಗಳ ಬೆಂಬಲದೊಂದಿಗೆ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲು ತಮ್ಮೆಲ್ಲರ ಸಹಾಯ, ಸಹಕಾರ ಸಲಹೆ,ಸೂಚನೆ ಮತ್ತು ಮಾರ್ಗದರ್ಶನದೊಂದಿಗೆ ಕಾರ್ಯನಿರ್ವಹಿಸೋಣ ಎಂದು ಆಶಿಸುತ್ತಾ 25ನೇ ವಾರ್ಷಿಕ ವರದಿ ಪುಸ್ತಕವಾಗಿ ಹೊರತರುವುದಕ್ಕೆ ತುಂಬಾ ಹರ್ಷವಾಗುತ್ತದೆ ಎಂಬುದನ್ನು ತಿಳಿಸಲು ಇಚ್ಛಿಸುತ್ತೇನೆ.

**ಶ್ರೀ ಎಂ ವೆಂಕಟೇಶ**
ನಿರ್ದೇಶಕರು/ಕಾರ್ಯದಶಿಗಳು
ಸರ್ಚ ಸ್ವಯಂ ಸೇವಾ ಅಭಿವೃದ್ಧಿಸಂಸ್ಥೆ (ರಿ)
ಬಾಗಲಕೋಟ



Scanned by PDF Scanner



## ಆಡಳಿತ ಮಂಡಳಿ ಸದಸ್ಯರ ನುಡಿ

ಸರ್ಚ ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆ (ರಿ) ಬಾಗಲಕೋಟೆ, ಈ ಸಂಸ್ಥೆಯು ಬೆಳೆದು ಬಂದ ದಾರಿ ಬಗ್ಗೆ ಹೇಳಿಕೊಳ್ಳಲು ತುಂಬಾ ಸಂತೋಷ ಮತ್ತು ಹೆಮ್ಮೆಯ ವಿಷಯವೆನಿಸುತ್ತದೆ. ಸಂಸ್ಥೆ ಕಳೆದ 25 ವರ್ಷಗಳಿಂದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ರೈತರು, ಮಹಿಳೆಯರು ಮತ್ತು ಮಕ್ಕಳ ಜೊತೆಗೆ ಕೆಲಸ ಮಾಡುತ್ತಲಿದೆ. ಮಹಿಳೆಯರ ಸಬಲೀಕರಣಕ್ಕಾಗಿ ಸಂಘಗಳ ರಚನೆ ಮಾಡುವ ಮುಖಾಂತರ ಸಾಮಾಜಿಕವಾಗಿ,ಆರ್ಥಿಕವಾಗಿ, ಶೈಕ್ಷಣಿಕವಾಗಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಸುಧಾರಣೆ ಹಂತಕ್ಕೆ ತರಲಾಗಿದೆ. ಸಂಘಗಳಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅಲ್ಲಿ ಕಂಡು ಬಂದಿರುವಂತಹ ಹಲವಾರು ಸಮಸ್ಯೆಗಳನ್ನು ಗುರುತಿಸಿ ಅವುಗಳಿಗಾಗಿ ಯೋಜನೆಗಳನ್ನು ಹಾಕಿಕೊಳ್ಳಲಾಯಿತು. ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಬಾಲಕಾರ್ಮಿಕ ವಿಷೇಶ ವಸತಿ ಶಾಲೆ ನಡೆಸುವ ಮುಖಾಂತರ ಮಕ್ಕಳನ್ನು ಮುಖ್ಯವಾಹಿನಿಗೆ ತರಲಾಯಿತು. ಈ ಶಾಲೆಯಲ್ಲಿ ಓದಿದ ಮಕ್ಕಳು ಈಗ ಹಲವಾರು ಕಛೇರಿಗಳಲ್ಲಿ ಉದ್ಯೋಗದಲ್ಲಿ ತೊಡಗಿದ್ದಾರೆ ಎಂದು ಹೇಳಲು ಖುಷಿಯಾಗುತ್ತದೆ. ಅನಾಥ ಮಕ್ಕಳಿಗೆ (ಪರಿತ್ಯಕ್ತ ಮಕ್ಕಳು. ತಾಯಿಯಿಂದ ಒಪ್ಪಿಸಲ್ಪಟ್ಟಂತಹ ಮಕ್ಕಳಿಗಾಗಿ) 2010 ನೇ ಸಾಲಿನಲ್ಲಿ ದತ್ತು ಕೇಂದ್ರವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುಖಾಂತರ ಪಾರಂಭಿಸಿ, ಕೇಂದ್ರ ದತ್ತು ಸಂಪನ್ಮೂಲ ಪಾಧಿಕಾರದ ಪ್ರಕಾರ ಕಾನೂನಿನ ಮೂಲಕ ಮಕ್ಕಳನ್ನು ದತ್ತು ಪ್ರಕ್ರಿಯೆಯಲ್ಲಿ ತೊಡಗಿಸುತ್ತಲಿದೆ. ಅದೇ ರೀತಿ 2022-23 ನೇ ಸಾಲಿನಲ್ಲಿ 18 ರಿಂದ 35 ವರ್ಷದೊಳಗಿರುವ ವಿಶೇಷಚೇತನ ಯುವಕ/ಯವತಿರಿಗಾಗಿ ಉದ್ಯೋಗ ಪೂರ್ವ ತಯಾರಿ ತರಬೇತಿಯನ್ನು ಎಪಿಡಿ ಸಂಸ್ಥೆ ಬೆಂಗಳೂರ ಇವರ ಮುಖಾಂತರ ನಡೆಸಿ ವಿಶೇಷಚೇತನರನ್ನು ಉದ್ಯೋಗಾವಕಾಶದಲ್ಲಿ ತೊಡಗಿಸಲಾಯಿತು. 18 ರಿಂದ 35ವರ್ಷದೊಳಗಿರುವ ಮಹಿಳೆಯರಿಗಾಗಿ ಬ್ಯೂಟಿಷಿಯನ್ ಮತ್ತು ಹೊಲಿಗೆ ತರಬೇತಿ ಯುವಕ/ಯುವತಿಯರಿಗಾಗಿ ಕಂಪ್ಯೂಟರ್ ತರಬೇತಿ ನಡೆಸುತ್ತಲಿದೆ. ಪ್ರಸ್ತುತವಾಗಿ ಇಸ್ಸಿಲಾರ್ ವಿಜನ್ ಫೌಂಡೇಶನ್ ಬೆಂಗಳೂರ ಇವರ ಮುಖಾಂತರ ಬಾಗಲಕೋಟೆ ಜಿಲ್ಲೆಯ 6 ತಾಲೂಕಗಳಲ್ಲಿ ಒಂದೊಂದಾಗಿ, 6 -14 ವರ್ಷದೊಳಗಿರುವ ಶಾಲಾ ಮಕ್ಕಳ ಕಣ್ಣು ತಪಾಸಣೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಗಿಫ್ಟೇಬಲ್ ಇಂಡಿಯಾ ಬೆಂಗಳೂರ ಇವರ ಮುಖಾಂತರ ವಿಷೇಶಚೇತನರಿಗೆ ಗಿಫ್ಟ್‌ಐಟಂ ತಯಾರಿಸುವ ತರಬೇತಿ ನಡೆಸುತ್ತಲಿದೆ. ಸದರಿ ಸಂಸ್ಥೆಯು ಸತತ ಕಾರ್ಯಕ್ರಮಗಳನ್ನು ತೊಡಗಿಸಿಕೊಂಡು ಅಭಿವೃದ್ಧಿಯ ಪಥದಲ್ಲಿ ಸಾಗುತ್ತಲಿದೆ. ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಂಸ್ಥೆ ಬೆಳೆಯಲು ಸಹಾಯ ಮಾಡಿದಂತಹ ಸರಕಾರ, ಇತರೆ ಸಂಸ್ಥೆಗಳು, ದಾನಿಗಳು ಅಲ್ಲದೆ ನಮ್ಮೊಂದಿಗೆ ಜೊತೆಗೂಡಿ, ಸಹಾಯ, ಸಹಕಾರಕೊಟ್ಟು ಹೊಂದಾಣಿಕೆಯಿಂದ ಸಮಯಕ್ಕೆ ತಕ್ಕಂತಹ ಮಾರ್ಗದರ್ಶನ ನೀಡುತ್ತಲಿರುವ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಿಗೆ ಮತ್ತು ಹಾಕಿಕೊಂಡತಹ ಯೋಜನೆಗಳ ಅಭಿವೃದ್ಧಿ ಪಥದಲ್ಲಿ ನಡೆಯವದಕ್ಕೆ ಒಗ್ಗಟ್ಟಾಗಿ ಕೈಗೆ ಕೈಜೋಡಿಸಿ ನಿಂತಿರುವಂತಹ ಸಿಬ್ಬಂದಿ ವರ್ಗದವರಿಗೆ, ಪ್ರತ್ಯಕ್ಷವಾಗಿ/ಪರೋಕ್ಷವಾಗಿ ಸಹಾಯ ಮಾಡಿದಂತಹ ಎಲ್ಲ ಮಹನೀಯರಿಗೆ ನಾನು ಋಣಿಯಾಗಿದ್ದೇನೆ. ಅವರಿಗೆ ನನ್ನ ಕೃತಜ್ಞತೆಗಳು.

**ಶ್ರೀಮತಿ. ಮಂಜುಳಾ. ವೈ. ಜೋಶಿ**
ಆಡಳಿತ ಮಂಡಳಿ ಸದಸ್ಯರು
ಸರ್ಚ ಸಂಸ್ಥೆ (ರಿ) ಬಾಗಲಕೋಟೆ.



Scanned by PDF Scanner

# ಸರ್ಚ ಸ್ವಯಂ ಸೇವಾ ಸಂಸ್ಥೆ ಬೆಳ್ಳಿ ಹಬ್ಬದಲ್ಲಿ

## "ನಡೆದುಬಂದ ದಾರಿಯ ಒಂದು ಅವಲೋಕನ– 25ರ ಸಂಭ್ರಮದಲ್ಲಿ ಹೊಸ ಸಾಧನೆಗಳ ಮಜಲುಗಳತ್ತ"

ನಮ್ಮ ಪ್ರೀತಿಯ ಮತ್ತು ಹಾರೈಸಿದ ಸಂಘಟನೆ ಸರ್ಚ (ಸಾಮಜಿಕ, ಶೈಕ್ಷಣಿಕ ಚಟುವಟಿಕೆಗಳು ಗ್ರಾಮೀಣ ಹೆಣ್ಣು ಮಕ್ಕಳು ಮತ್ತು ಬಾಲಕರಿಗಾಗಿ ಅಲ್ಲದೆ ಅವರ ಆರೋಗ್ಯದ ಸಮಗ್ರಕಾಳಜಿ) ಈಗ ಬೆಳ್ಳಿ ಹಬ್ಬವನ್ನು ಆಚರಸುತ್ತಲಿದೆ. 25 ವರ್ಷಗಳ ಅರ್ಥಪೂರ್ಣ ಯಶಸ್ವಿ ಅಸ್ತಿತ್ವವು ಒಂದು ಸಂಘಟನೆಯ ಜೀವಿತಾವಧಿಯಲ್ಲಿ, ಅದು ಕೂಡ ನಾವು ಆಯ್ದುಕೊಂಡ ಸೇವಾ ಕ್ಷೇತ್ರದಲ್ಲಿ, ಲಾಭ ರಹಿತ ಸರ್ಚದಂತಹ ಸರ್ಕಾರೆತರ ಸಂಸ್ಥೆಗಳ ವಿಷಯಗಳಲ್ಲಿ ಈ ಅಸ್ತಿತ್ವವು ಹೆಚ್ಚು ಮಹತ್ವಪೂರ್ಣವಾಗುತ್ತದೆ. ಸಂಸ್ಥೆಯ ಇತಿಹಾಸದ ಪುಟಗಳನ್ನು ಹೊರಳಿಸಿದಾಗ ನಾವು ಕ್ರಮಿಸಿದ ಮೈಲುಗಲ್ಲುಗಳು, ನಮ್ಮನ್ನು ಮತ್ತಷ್ಟು ವಿನೀತರನ್ನಾಗಿ, ವಿನಮ್ರನ್ನಾಗಿ ಹೆಚ್ಚು ಪ್ರಾಮಾಣಿಕ ಮತ್ತು ಹೆಚ್ಚು ದಕ್ಷತೆಯಿಂದ ಜನರ ಸೇವೆಗೆ ಅಣೀಗೊಳಿಸಿಕೋಳ್ಳಲು ಪ್ರೇರೇಪಿಸುತ್ತದೆ.

ಸರ್ಚ ಎಲ್ಲಾ ಸಂಘಟನೆಗಳಂತೆ ಒಂದು ವಿನಮ್ರವಾದ ಆರಂಭ ಹೊಂದಿತ್ತು. ನಿರ್ದೇಶಕ ಶ್ರೀ ಎಂ. ವೆಂಕಟೇಶ, ರಾಯಚೂರಿನ ಸಮೂಹ ಸಂಸ್ಥೆಯಿಂದ ಬಂದರೆ, ಶ್ರೀಮತಿ. ಮಂಜುಳಾ ಜೋಶಿಯವರು ಬಾಗಲಕೋಟ ಜಿಲ್ಲೆಯಲ್ಲಿ ಆಗ ಸಕ್ರಿಯವಾಗಿದ್ದ ಸೀಡಾ ಸಂಸ್ಥೆಯಿಂದ ವೆಂಕಟೇಶ ಅವರನ್ನು ಸೇರಿಕೊಂಡರು. ಕಮತಗಿ ಗ್ರಾಮದಲ್ಲಿ ಬಹಳ ಸಣ್ಣ ಪ್ರಮಾಣದಲ್ಲಿ ಆರಂಭ. ಆಕ್ಸ್‌ಫಾಮ್ಸ್ ಇಂಡಿಯಾ, ಕ್ರಾಯ್ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಯೋಜನೆಯನ್ನು ಜಾರಿಗೊಳಿಸಲು ನೀಡಿದ್ದು ಬಿಟ್ಟರೆ, ಯಾವುದೇ ಪ್ರಾಯೋಜಿತ ಯೋಜನೆಗಳು ಇರಲಿಲ್ಲ. ಹೊಸ ಸಂಸ್ಥೆಯಾಗಿದ್ದರಿಂದ ಸರ್ಕಾರಿ ಯೋಜನೆಗಳೂ ಸಿಕ್ಕಿರಲಿಲ್ಲ.




ಆದರೆ ಆ ದೀನಗಳಲ್ಲಿ ಬಿಜಾಪುರ ಜಿಲ್ಲೆ (ಅಂದಿನ ಅವಿಭಜಿತ ಬಾಗಲಕೋಟೆ ,ಮತ್ತು ಬಿಜಾಪುರ ಜಿಲ್ಲೆಗಳು) 5 ನದಿಗಳು ಹರಿಯುತ್ತಿದ್ದರೂ ನೀರಾವರಿ ಪ್ರದೇಶ ಕಡಿಮೆ ಇದ್ದು ಹಿಂದುಳಿದ ಜಿಲ್ಲೆ ಎಂಬ ಎಗ್ಗಳಿಕೆಗೆ ಪಾತ್ರವಾಗಿತ್ತು. ಜಮಖಂಡಿ, ಮುಧೋಳ ಮತ್ತು ಬೀಳಗಿ ತಾಲೂಕಗಳು ನೀರಾವರಿ ಸೌಕರ್ಯವನ್ನು ಹೊಂದಿದ್ದರು. ಉಳಿದ ತಾಲೂಕಗಳಲ್ಲಿ ಮಳೆ ಆಭಾವದಿಂದ ಕೃಷಿ ಲಾಭದಾಯಕ ಕೆಲಸ ವಾಗಿರಲಿಲ್ಲ. ಇದರಿಂದಾಗಿ ದುಡಿಯಲು ಯೋಗ್ಯರಿದ್ದ ಜನ ಸಮುದಾಯಗಳು ಬಿತ್ತನೆ ಸಮಯದ ನಂತರ ದುಡಿಯಲು ಮಂಗಳೂರು, ಪುಣೇ, ಮೀರಜ್, ಗೋವಾ ಮತ್ತು ಬೆಂಗಳೂರಗಳಿಗೆ ಗುಳೆ ಹೋಗುತ್ತಿದ್ದರು. ಈ ಗುಳೆ ಹೋಗುವಿಕೆ, ಪ್ರದೇಶದ ಅಭಿವೃದ್ಧಿಯ ಮೇಲೆ ದುಷ್ಪರಿಣಾಮವನ್ನು ಬೀರಿತ್ತು ಇಲ್ಲಿ ಉಳಿದಕೊಂಡ ವಯೋವೃದ್ಧರು ಮಹಿಳೆಯರು ಮತ್ತು ಮಕ್ಕಳಿಗೆ ಸರಿಯಾದ ಆರೋಗ್ಯ ಶಿಕ್ಷಣ ಮತ್ತು ಕೆಲಸ ಯಾವವು ಸರಿಯಾಗಿ ದೊರಕುತ್ತಿದ್ದಿಲ್ಲ.



Scanned by PDF Scanner

ಗ್ರಾಮೀಣ ಭಾಗದಲ್ಲಿ ಮಳೆಗಾಲದಲ್ಲೂ ಸಹ ಉತ್ತಮ ಕುಡಿಯುವ ನೀರು ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿದ್ದಿಲ್ಲ ಮಹಿಳೆಯರು ಮೈಲುಗಟ್ಟಲೆ ಕೊಡ ಹೊತ್ತು ನೀರಿಗಾಗಿ ಅಲೆಯುವ ದೃಶ್ಯ ಸಾಮಾನ್ಯವಾಗಿತ್ತು. ಕಮತಗಿ, ಅಮೀನಗಡ, ಗುಳೆದಗುಡ್ಡ ಮತ್ತು ಇಲಕಲ್ಲಗಳಂತಹ ನೇಕಾರಿಕೆ ಪಟ್ಟಣಗಳಲ್ಲೂ ಕುಟಂಬ ನಿರ್ವಹಣಕ್ಕೆ ಸಾಲುವಷ್ಟು ಆದಾಯದ ದುಡಿಮೆ ಸಿಗುತ್ತಿರಲಿಲ್ಲ ಸರ್ಚ ಇಂತಹ ಕಠಿಣ ಪರಿಸ್ಥಿತಿಗಳಲ್ಲಿ ಹಿಂದುಳಿದ, ಅಂಚಿನ, ರೈತಾಪಿವರ್ಗದ, ನೇಕಾರರ ಕುಟುಂಬಗಳಿಗೆ ನಿರಂತರವಾದ ಆದಾಯ ದೊರೆಯುವಂತಹ ಅಭಿವೃದ್ಧಿಗಾಗಿ ಕೆಲಸ ಮಾಡಬೇಕಿತ್ತು.



ಆಗ ಸರ್ಚ ಸಂಸ್ಥೆಯು ಕಮತಗಿ ಪಟ್ಟಣವನ್ನು ಕೇಂದ್ರವಾಗಿಸಿಕೊಂಡು ಜನರನ್ನು ಸಂಘಟಿಸಲು, ಅವರಲ್ಲಿ ಅಭಿವೃದ್ಧಿಯ ಅರಿವು ಮೂಡಿಸಲು ಮುಂದಾಯಿತು ಆಗ ಸರ್ಕಾರಗಳೂ ಸ್ವ-ಸಹಾಯ ಗುಂಪುಗಳ ರಚನೆಗೆ ಒತ್ತು ಕೊಡುತ್ತಿದ್ದದು (90ರ ದಶಕದಲ್ಲಿ) ಸರ್ಚಚಿನ ಕೆಲಸಗಾರರು ಮತ್ತು ಸ್ವಯಂ ಸೇವಾ ಕಾರ್ಯಕರ್ತರ ಕರ್ತವ್ಯ ಶೀಲತೆಗೆ ಸವಾಲಾಗಿತ್ತು ಆಗ ಸಂಘಟನೆ ಹುನಗುಂದ, ಬದಾಮಿ, ಬಾಗಲಕೋಟೆ (ಬಾಗಲಕೋಟೆ ಜಿಲ್ಲೆಯಲ್ಲಿ) ಕುಷ್ಟಗಿ ಕೊಪ್ಪಳ (ಕೊಪ್ಪಳ ಜಿಲ್ಲೆಯಲ್ಲಿ) ನರೇಗಲ್ ರೋಣ ಹೊಳೆಆಲೂರ ಗದಗ, ನರಗುಂದ ತಾಲೂಕಗಳು (ಗದಗ ಜಿಲ್ಲೆಯಲ್ಲಿ) ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸಿತು. ಸರ್ಚನ ಕಾರ್ಯಕರ್ತರು ಪ್ರಾಮಾಣಿಕವಾಗಿ ಅತೀ ಕಡೆಮೆ ಸಮಯದಲ್ಲಿ ಈ ಕೆಲಸ ಸಾದಿಸಿದರು. ಕಮತಗಿ ಅಂತಹ ಚಿಕ್ಕ ಪಟ್ಟಣ 150 ಮಹಿಳಾ ಸಂಘಗಳನ್ನು ಹೊಂದಿದ್ದರೆ ಅಮೀನಗಡ ಗುಳೆದಗುಡ್ಡಗಳು 70 ರಿಂದ 80 ಸ್ವ-ಸಹಾಯ ಗುಂಪುಗಳನ್ನು ಹೊಂದಿದ್ದವು.

ಒಂದು ಸಲ ಸ್ವ-ಸಹಾಯ ಗುಂಪುಗಳ ರಚನೆ ಒಂದು ಹಂತಕ್ಕೆ ಬಂದಾಗ ಸರ್ಚ ಸಂಸ್ಥೆಯು ಈ ಗುಂಪುಗಳ ಸದಸ್ಯರಿಗೆ ತರಬೇತಿ ಶಿಭಿರಗಳನ್ನು ಆಯೋಜಿಸಿತು ನಿರಂತರ ಆದಾಯದ ಪಾರಂಪರಿಕ ವೃತ್ತಿಗಳಾದ ಹೊಲಿಗೆ, ಕಸೂತಿ, ಗುಡಿಕೈಗಾರಿಕೆ, ನೇಕಾರಿಕೆ ಅಲ್ಲದೆ ಕೃಷಿ ವಿಭಾಗದಲ್ಲಿ ಕುರಿಸಾಕಾಣಿಕೆ, ಹೈನುಗಾರಿಕೆ ಮತ್ತು ಸಾಮಾಜಿಕ ಅರಣ್ಯಕ್ಕಾಗಿ ಸಸಿಗಳನ್ನು ಬೆಳೆಸುವಿಕೆ ಈ ಕ್ಷೇತ್ರಗಳಲ್ಲಿ ಪಾರಂಪರಿಕ ಜ್ಞಾನವನ್ನು ಹಿರಿಯರಿಂದ ದೊರಕಿಸುವುದಲ್ಲದೆ ಹಣಕಾಸು ನಿರ್ವಹಣೆ, ಉಳಿತಾಯ, ಮಿತಾಯವನ್ನು ಗುಂಪಿನ ಸದಸ್ಯರಲ್ಲಿ ಅಗತ್ಯಕ್ಕೆ ಅನುಗುಣವಾಗಿ ಸಾಲ ನೀಡುವುದು ಮಧ್ಯಮ ತರಗತಿಯ ಶಹರಗಳಲ್ಲಿ ಕಿರಿಕುಳ ವ್ಯಾಪರ ಆರಂಭಿಸುವಿಕೆ ಈ ಬಗ್ಗೆ ನಿರಂತರವಾಗಿ ತರಬೇತಿ ಶಿಬಿರಗಳನ್ನು ಆಯೋಜಿಸಲಾಯಿತು.



Scanned by PDF Scanner









ಈ ಚಟುವಟಿಕೆ ಒಂದು ಚಳುವಳ ದಂತೆ ಹಬ್ಬಿತ್ತು ಮತ್ತು ಒಂದು ಹಂತದಲ್ಲಿ ಬಾಗಲಕೋಟೆ, ಕೊಪ್ಪಳ, ಗದಗ ಜಿಲ್ಲೆಗಳಲ್ಲಿ ಸರ್ಚ 4000 ಸ್ವ–ಸಹಾಯ ಗುಂಪುಗಳ ರಚನೆಯ ಗುರಿಯನ್ನು ಸರ್ಚ ದಾಟಿತು. ದುಡಿಮೆಯ ಬಗ್ಗೆ ತರಬೇತಿಯ ಶಿಬಿರಗಳು ಸರ್ಚಿನ ಕಾರ್ಯಕರ್ತರು ಮತ್ತು ಸ್ವ–ಸಹಾಯ ಗುಂಪುಗಳ ಸದಸ್ಯರಿಗಾಗಿ ಕಮತಗಿ, ಕುಡಲಸಂಗಮ, ಅಮೀನಗಡ, ಚಿಕ್ಕಮಾಗಿ ಮತ್ತು ಇಸ್ಲಾಂಪುರಗಳಲ್ಲಿ ನಡೆದವು ಆ ದಿನಗಳಲ್ಲಿ ಸರ್ಚ ಸಂಸ್ಥೆ ತುಂಬ ಕ್ರಿಯಾಶೀಲವಾದ ಮತ್ತು ಶಕ್ತಿಯುತವಾದ ಆಡಳಿತ ಮಂಡಳಿಯನ್ನು ಹೊಂದಿತ್ತು. ಮಂಡಳಿಯ ಸದಸ್ಯರು ಬೇರೆ ಬೇರೆ ವಿಭಾಗಗಳಲ್ಲಿ ವಿಷಯನೈಪುಣ್ಯತೆ ಹೊಂದ್ದಿಕೊಂಡಿದ್ದರು ಇಲ್ಲಿ ಅಂತಹ ಕೆಲ ಸೇವಾ ನಿರಂತರ ಸ್ಮರಣೆ ಅಗತ್ಯವೆನಿಸುತ್ತದೆ. ಶ್ರೀ ವಾಯ್.ವಾಯ್. ಬೆಳ್ಳಿ, ನಿಂಬಲಗುಂದಿಯ ಪಾರಂಪರಿಕ ಕೃಷಿ ತಜ್ಞರಾದರೆ, ಶ್ರೀಮತಿ ಗುಂಡಮ್ಮ ಹಲಗತ್ತಿ ಅವರು ನಿವೃತ ಶಿಕ್ಷರಾಗಿದ್ದು ಮಹಿಳೆಯರ ಅಭಿವೃದ್ಧಿ ಪರ ಕಾರ್ಯಕ್ರಮಗಳಲ್ಲಿ ಅಹರ್ನಿಶಿ ದುಡಿದರು. ಅವರು ನಮ್ಮ ಸಂಘಟನೆಯ ಹೆಮ್ಮೆಯ ಅಧ್ಯಕ್ಷರಾಗಿದ್ದು ಸೇವಾ ನಿವೃತ್ತಿಯ ನಂತರ ಅವರ ಜೀವಿತಕಾಲ ಮುಗಿಯುವವರೆಗೂ ಸರ್ಚ ಅಧ್ಯಕ್ಷರಾಗಿದ್ದರು. ಅಂತೆಯೆ ಗುಳೇದಗುಡ್ಡದ ನಿವೃತ್ತ ಶಿಕ್ಷಕ ಶ್ರೀ ವಾಯ್ ಎಮ್ ಜೋಶಿ ಅವರು ತರಬೇತಿಗಳಲ್ಲಿ ಕಲಾ ವಿಭಾಗದಲ್ಲಿ ಇರುವ ಅವಕಾಶಗಳ ಬಗ್ಗೆ ಸದಸ್ಯರಲ್ಲಿ ಅರಿವು ಮೂಡಿಸಲು ಶ್ರಮಿಸಿದರು ಅದರಂತೆಯೆ ಶ್ರೀ ಸಿ.ವಿ. ಲೂತಿಮಠ ನಿವೃತ್ತ ಪ್ರಭಂದಕರು ಬಾಗಲಕೋಟೆ ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕ ಇವರು ಕೂಡ ಸರ್ಚನ ಆಡಳಿತ ವಿಭಾಗದ ಅಭಿವೃದ್ಧಿಗಾಗಿ ಬಹಳಷ್ಟು ಶ್ರಮಿಸಿದರು.

ಸರ್ಚ ಈ ಮಹನೀಯರನ್ನು ಗೌರವಪೂರ್ವಕವಾಗಿ, ಶ್ರದ್ಧೆಯಿಂದ ಈ ಸಂಧರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತದೆ.



Scanned by PDF Scanner

ಈಗಿನ ಸರ್ಚನ ಆಡಳಿತ ಮಂಡಳಿ 3 ಜನ ವಕೀಲರು 1 ಅರ್ಥಶಾಸ್ತ್ರಜ್ಞರು, 1 ವೈದ್ಯರು, 1 ನಿವೃತ ಬ್ಯಾಂಕ ಅಧಿಕಾರಿ, 1 ಕಾರಪೋರೇಟ್ ಸಲಹೆಗಾರರು ಮತ್ತು ಒಬ್ಬರು ಅರೆವೈದ್ಯಕೀಯ ಸೇವೆಗಳಲ್ಲಿ ನಿರತರಾಗಿ ಇರುವವರು ಇದ್ದಾರೆ. 3 ಜನ ಮಹಿಳಾ ಪ್ರತಿನಿಧಿ ಗಳಿದ್ದಾರೆ. ಆಡಳಿತ ಮಂಡಳಿ ಪ್ರತಿಯೊಂದು ಯೋಜನೆ, ಸಂಘಟನೆಯ ನಿಲುವುಗಳು ಹಣಕಾಸಿನ ಪರಿಸ್ಥಿತಿಗಳ ಬಗ್ಗೆ ಕೂಲಂಕುಶ ಚರ್ಚೆ ಮಾಡಿ ಯೋಜನೆಯ ಕಾರ್ಯಗತ ಗೊಳಿಸುವಿಕೆಗೆ ಶ್ರಮಿಸುತ್ತದೆ.

ಸರ್ಚ ಸಂಸ್ಥೆಯು ಬಾಗಲಕೋಟೆ, ಕೊಪ್ಪಳ, ಗದಗ ಜಿಲ್ಲೆಗಳ ಜನ ಸಮುದಾಯಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳ ನಿವಾರಣೆಗಾಗಿ ಶ್ರಮಿಸುತ್ತ ಬಂದಿದೆ, ಅವು

1. ಕಾರ್ಮಿಕರ ಗುಳೆ ಹೋಗುವಿಕೆಯ ಪರಿಣಾಮಗಳು.
2. ಗ್ರಾಮೀಣ ಹೆಣ್ಣು ಮಕ್ಕಳಲ್ಲಿ ಸ್ವ–ಸಹಾಯ ಗುಂಪುಗಳ ಮೂಲಕವಾಗಿ ನಾಯಕತ್ವ ಗುಣವನ್ನು ಬೆಳೆಸುವುದು.
3. ಕೃಷಿಯಲ್ಲಿ ಇರುವ ಕೆಲಸಗಳ ಬಗ್ಗೆ ತರಬೇತಿಗಳನ್ನು ಆಯೋಜಿಸುವುದು.
   ಅ. ನರ್ಸರಿ ಬ. ವರ್ಮಿನ್ ಕಾಂಪೋಸ್ಟ ಗೊಬ್ಬರ ತೈಯಾರಿಕೆ ಸ. ಸಾಮಾಜಿಕ ಅರಣ್ಯ ಡ. ಇತರೆ ವಿಭಾಗಳಲ್ಲಿ ತರಬೇತಿ ನೇಕಾರಿಕೆ, ಹೊಲಿಗೆ, ಕಸೂತಿ, ಗುಡಿಕೈಗಾರಿಕೆ, ಕುರಿಸಾಕಾಣಿಕೆ, ಹೈನುಗಾರಿಕೆ ಮತ್ತು ಸಣ್ಣ ಪುಟ್ಟ ಕಿರಾಣಿ ಅಂಗಡಿ ನಡೆಸುವುದು. ಮತ್ತು ಗಂಡಸರಿಗಾಗಿ ವರ್ಮಿನ್ ಕಾಂಪೋಸ್ಟ್ ತೈಯಾರಿಕೆ, ನರ್ಸರಿ ಮಾಡುವುದು, ವಾಟರ್ ಶೆಡ್ಸ್ ಯೋಜನೆಗಳಿಂದ ನೀರಾವರಿ ಮಾಡುವುದು ಮತ್ತು ಐತಿಹಾಸಿಕ ಕ್ಷೇತ್ರಗಳಲ್ಲಿ ಪ್ರವಾಸಿಗರಿಗೆ ಆ ಕ್ಷೇತ್ರಗಳ ಬಗ್ಗೆ ಮಾಹಿತಿ, ಮಾರ್ಗದರ್ಶನ ನೀಡುವುದು (ಟ್ರಾವಲ್ ಗೈಡ್ಸ್)
4. ಬಾಲಕಾರ್ಮಿಕ ಪದ್ದತಿ ವಿರುದ್ಧ ಜನರಲ್ಲಿ ಅರಿವು ಮೂಡಿವಿಕೆ– ಸಿ.ಎ.ಸಿ.ಎಲ್ ನ ಕಾರ್ಯಕ್ರಮಗಳು.
5. ದೇವದಾಸಿ ಪದ್ಧತಿಯ ನಿರ್ಮೂಲನೆಗಾಗಿ ಜನರಲ್ಲಿ ಅರಿವು ಮೂಡಿಸುವುದು.
6. ಗಣಿ ಉದ್ಯಮದಿಂದ ಗ್ರಾಮೀಣ ಕಾರ್ಮಿಕರ ಮೇಲಾಗುವ ಪರಿಣಾಮಗಳು ಅವರ ಮಕ್ಕಳಿಗಾಗಿ ವಿಶೇಷ ಶಾಲೆಗಳನ್ನು ನಡೆಸುವುದು (ಶಾಲೆ ಬಿಟ್ಟ ಮಕ್ಕಳು).
7. ಏಡ್ಸ್ ಮಾರಿಯ ನಿರ್ಮೂಲನೆಗಾಗಿ ಸರ್ಕಾರದ ಎಲ್ಲ ಪ್ರಯತ್ನಗಳಲ್ಲಿ ಸಹ ಭಾಗಿಯಾಗಿ ಏಡ್ಸನ ದುಷ್ಟ ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು. ಇವಗಳ ಬಗ್ಗೆ ಪ್ರಚಾರ ನಡೆಸುವುದು. ಸಾಮಾಜಿಕ ಕಲಂಕ, ಕುಟುಂಬಗಳು ಸಾಮಾಜಿಕ ಭಹಿಷ್ಕಾರವನ್ನು ಎದುರುಸಿತ್ತಿರುವುದು, ಏಡ್ಸ್ ರೋಗಿಗಳ ಅದರಲ್ಲು ವಿಶೇಷವಾಗಿ ಮಹಿಳಾ ರೋಗಿಗಳ ಉಪಚಾರಕ್ಕಾಗಿ ಶ್ರಮಿಸುವುದು.

ಯಶಸ್ವಿ ಸ್ವ–ಸಹಾಯ ಗುಂಪುಗಳ ಚಳುವಳಿಯ ಕಥೆಯಲ್ಲಿ 3 ಜಿಲ್ಲೆಗಳ ಬ್ಯಾಂಕುಗಳ ಪಾತ್ರ ಮಹತ್ತರವಾದ್ದಿದೆ ಈ ಜಿಲ್ಲೆಗಳ ಪ್ರಮೂಖ ಬ್ಯಾಂಕುಗಳಾದ ಕೆನರಾ, ಸಿಂಡಿಕೇಟ್, ಮೈಸೂರ ಬ್ಯಾಂಕ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಹಾಗೂ ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಗಳು ತಮ್ಮ ಸಹಾಯ ಹಸ್ತವನ್ನು ಚಾಚಿ ಗ್ರಾಮೀಣ ಮಹಿಳೆಯರ ಆರ್ಥಿಕ ಚಟುವಟಿಕೆಗಳ ದುಡಿಯುವ ಬಂಡವಾಲದ ಕೊರತೆ ನೀಗಿಸಿದರು. ನಮ್ಮ ಗ್ರಾಮೀಣ ಮಹಿಳೆಯರಾದರು ಈ ಸಾಲಗಳನ್ನು ತಮ್ಮ ಆದಾಯದಲ್ಲಿ ತೀರಿಸುವಲ್ಲಿ ಮುಂಚೂಣಿಯಾಗಿ ನಿಂತು ಇತರ ಸಾಲಗಾರರಿಗೆ ಮಾದರಿಯಾದರು ಅಷ್ಟೇ ಅಲ್ಲ ಈ ಬ್ಯಾಂಕುಗಳಲ್ಲಿ ಸಂಘದ ಠೇವಣಿಯನ್ನು ಗಣನೀಯ ಪ್ರಮಾಣದಲ್ಲಿ ಶೇಖರಿಸಿ ಬ್ಯಾಂಕುಗಳ ಸಿಬ್ಬಂದಿಗಳೊಂದಿಗೆ ಉತ್ತಮ ಸಹಕಾರ ಹೊಂದಿದ್ದರು. ಇದರೊಟ್ಟಿಗೆ ಸೈಕಲ್ ಬ್ರ್ಯಾಂಡ್ ಅಗರ ಬತ್ತಿ ಕಂಪನಿ ಮತ್ತು ಐ.ಟಿ.ಸಿ ಕಂಪನಿಗಳು ನಮ್ಮ ಮಹಿಳಾ ಸಂಘಗಳು ತಯಾರಿಸಿದ ಅಗರಬತ್ತಿಗಳನ್ನು ಖರೀದಿಸಿ ಸಂಘಗಳ ಆರ್ಥಿಕ ಪ್ರಗತಿಗೆ ಕಾರಣೀಭೂತರಾದರು.



Scanned by PDF Scanner




ಹಣದ ಹೆಚ್ಚಿನ ವಹಿವಾಟು ಗ್ರಾಮೀಣ ಪ್ರದೇಶದಲ್ಲಿ ಇತರ ಯೋಜನೆಗಳ ಚಾಲನೆಗೆ ಮಾರ್ಗವಾಯಿತು. ಸರ್ವಋತು ರಸ್ತೆಗಳು, ಶಾಲೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು. ಬಸ್ ವ್ಯವಸ್ಥೆ ಉತ್ತಮ ವಿದ್ಯುತ್ ಸರಬರಾಜು ಈ ಎಲ್ಲಾ ಬೆಳವಣಿಗೆಗಳು ಯಶಸ್ವೀ ಸ್ವ-ಸಹಾಯ ಗುಂಪುಗಳ ಚಳುವಳಿಯ ಬಳುವಳಿಗಳಾದವು. ಈ ಪ್ರಗತಿಯಲ್ಲಿ ಸರ್ಚ ಸಂಸ್ಥೆಯು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಮುಂಚೂಣಿಯಲ್ಲಿ ನಿಂತು ಮಹತ್ತರ ಪಾತ್ರವಹಿಸಿತು. ಸರ್ಚನ ಕಾರ್ಯಕೌಶಲವನ್ನು ಗುರುತಿಸಿದ ದೊಡ್ಡ್ ರಾಷ್ಟ್ರೀಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳಾದ ಕ್ರಾಯ್, ಇಂಡುಜರ್ಮನ್ ಸರ್ವೀಸ್ ಸೊಸೈಟಿ, ಓಕ್ಸ್ ಫ್ಯಾಮ್ ನಂತಹ ಸಂಸ್ಥೆಗಳು ತಮ್ಮ ಮಹಿಳಾ ಮತ್ತು ಬಾಲ ಕಲ್ಯಾಣ ಯೋಜನೆಗಳ ಅನುಷ್ಠಾನಕ್ಕಾಗಿ ಸರ್ಚ ಸಂಸ್ಥೆಯನ್ನು ಆರಿಸಿಕೊಳ್ಳ ತೊಡಗಿದವು. ಇದರೊಟ್ಟಿಗೆ ಸರ್ಕಾರಿ ಯೋಜನೆಗಳು, ಸರ್ಕಾರದ ಸಿಬ್ಬಂದಿವರ್ಗದ ಸಹಕಾರ, ಸಮನ್ವಯ, ಮತ್ತು ಮಾರ್ಗದರ್ಶನ ಸರ್ಚ ಸಂಸ್ಥೆಯ ಯಶಸ್ವೀ ಬೆಳೆವಣಿಗೆಯಲ್ಲಿ ಗಮನಾರ ಪಾತ್ರ ವಹಿಸಿವೆ.

ಬಾಗಲಕೋಟೆ, ಗದಗ, ಕೊಪ್ಪಳ ಈ 3 ಜಿಲ್ಲೆಗಳಲ್ಲಿ ಸರ್ಚ ಸಂಸ್ಥೆ **4000** ಸ್ವ-ಸಹಾಯ ಗುಂಪುಗಳನ್ನು ರಚಿಸಿದೆ. ಸ್ವಾಭಾವಿಕವಾಗಿ ಸರ್ಚ ಸಂಸ್ಥೆ ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ತನ್ನ ಹೆಗ್ಗುರಿತಿನ ದಿನವನ್ನಾಗಿ ಪ್ರತಿ ವರ್ಷ ಮಾರ್ಚ 8 ರಂದು ಆಚರಿಸುತ್ತಾ ಬಂದಿದೆ. ಅಂದಿನ ದಿನ ಸಂಸ್ಥೆ ತನ್ನ ಮಹಿಳಾ ಸಂಘಗಳ ಯಶಸ್ವೀ ಚಟುವಟಿಕೆಗಳನ್ನು ಸಮಾಜದ ಮುಂದೆ ತರುವ ದಿನ ವನ್ನಾಗಿಸಿದೆ. ಈ ಮಹಿಳಾ ಸಂಘಗಳು ಆರ್ಥಿಕ ಸಬಲತೆಯ ಗುರುತಾಗಿ, ಗ್ರಾಮೀಣ ಭಾಗದ ಆರ್ಥಿಕ ಅಭಿವೃದ್ಧಿಯ ಬೆನ್ನಲುಬವಾಗಿ ಸ್ಥಳಿಯ ಸರ್ಕಾರಿ ಸಂಸ್ಥೆಗಳನ್ನು ಸಂವಹನ, ಆರೋಗ್ಯ, ಶಿಕ್ಷಣ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತಹ ಒತ್ತಡ ಹೇರುವಂತಹ ಪ್ರಾತಿನಿಧಿಕ ಗುಂಪುಗಳಾಗಿವೆ ಒಟ್ಟಿನಲ್ಲಿ ಗ್ರಾಮೀಣ ಭಾಗದ ಅಭಿವೃದ್ಧಿಯತ್ತ ಸಮುದಾಯಗಳ ಚಿಂತನೆಯನ್ನು ಗುಣಾತ್ಮಕವಾಗಿ ಬದಲಾಯಿಸುವಲ್ಲಿ ಈ ಮಹಿಳಾ ಚಳುವಳಿ ಬಹಳಷ್ಟು ಮಟ್ಟಿಗೆ ಕಾರಣವಾಗಿದೆ ಇಂತಹ ಬದಲಾವಣೆ ಸರ್ಚ ಸಂಸ್ಥೆಯ ಅಂತಿಮ ಗುರಿಯೂ ಆಗಿದೆ



Scanned by PDF Scanner








ಈ ವಿಷಯಗಳಲ್ಲಿ ಸಾಕಷ್ಟು ಯಶಸ್ವೀ ಕಥೆಗಳು ಇದ್ದು ಈ ವರದಿಯ ಪ್ರಮಾಣಕ್ಕೆ ಅನುಗುಣವಾಗಿ 3 ಪ್ರಸಂಗಗಳನ್ನು ಆರಿಸಿ ಕೊಂಡಿದ್ದೇವೆ. (ಸ್ಥಳಾಭಾವ)

ರಾಮತಾಳ ಹಳ್ಳಿಯಲ್ಲಿ ರೇಷನ್ ಅಂಗಡಿ ಖಾಸಗಿ ವ್ಯಕ್ತಿ ನಡೆಸುತ್ತಿದ್ದರು ಅವರಿಗೆ ಜನರಿಗೆ ಸೇವೆ ನೀಡ ಬೇಕೆಂಬ ಕಳಕಳಿಯಾಗಲೀ, ಗ್ರಾಮೀಣ ಜನರ ಆಹಾರ ಭದ್ರತೆಯ ಪರಿಕಲ್ಪನೆಯಾಗಲೀ ಇರಲಿಲ್ಲ. ಅದರಿಂದಾಗಿ ಆ ಹಳ್ಳಿಯ ಜನಕ್ಕೆ ರೇಷನ್ ಸೌಲಭ್ಯ ಸರಿಯಾಗಿ ದೊರಕುತ್ತಿದ್ದಿಲ್ಲ. ಜನ ಸರ್ಕಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು, ಯಾವದೇ ಪ್ರಯೋಜನವಾಗಲಿಲ್ಲ. ಕೆಳಹಂತದ ಸರ್ಕಾರಿ ಸಿಬ್ಬಂದಿಗಳು ರೇಷನ್ ಅಂಗಡಿಯ ಮಾಲೀಕನ ಜೊತೆ ಶಾಮೀಲಾಗಿದ್ದರು. ಹಳ್ಳಿಯಲ್ಲಿ ರಚನೆಯಾಗಿದ್ದ ನಮ್ಮ ಮಹಿಳಾ ಸ್ವ–ಸಹಾಯ ಸಂಘಗಳು ಪ್ರತಿ ಭಟನೆಗಿಳಿದು ಧರಣಿ ಸತ್ಯಾಗ್ರಹವನ್ನು ಆರಂಭಿಸಿದರು.  ಆಗ ಅಲ್ಲಿನ ತಹಸೀಲದಾರರು ಮಹಿಳಾ ಸಂಘಗಳ ಕಾರ್ಯಕರ್ತೆಯರಿಗೆ ಸವಾಲ ಎಸೆದು ವ್ಯವಸ್ಥೆಯನ್ನು ಸುಧಾರಿಸಲು ಮತ್ತು ಮೊದಲಿಗಿಂತ ಉತ್ತಮವಾಗಿ ರೇಷನ್ ಸೌಲಭ್ಯ ಒದಗಿಸಲು ಕೇಳಿಕೊಂಡರು. ನಮ್ಮ ಮಹಿಳಾ ಕಾರ್ಯಕರ್ತರು ಈ ಸವಾಲನ್ನು ಸ್ವೀಕರಿಸಿ ಒಂದು ಬಲಾಢ್ಯ ವ್ಯವಸ್ಥೆಯನ್ನು ರೇಷನ ಅಂಗಡಿ ನಡೆಸಲು ನಿರ್ಮಿಸಿ ಕೊಂಡರು ಅಷ್ಟೇ ಅಲ್ಲ ಆ ಹಳ್ಳಿಯ ಪ್ರತಿಯೊಂದು ಬಡ ಕುಟುಂಬವನ್ನು ರೇಷನ್ ಲಾಭ ಪಡೆಯುವಂತೆ ನೋಡಿ ಕೊಂಡರು. ದಶಕಗಳ ನಂತರವು ಈ ವ್ಯವಸ್ಥೆ ಇನ್ನು ಜಾರಿಯಲ್ಲಿದ್ದು ಸರ್ಚ ಸಂಸ್ಥೆ ಗ್ರಾಮೀಣ ಭಾಗದಲ್ಲಿ ಸ್ವ–ಸಹಾಯ ಗುಂಪುಗಳ ಚಳುವಳಿಯಲ್ಲಿ ನಿರ್ಮಿಸಿದ ಪ್ರಭಲ ಮಹಿಳಾ ನಾಯಕತ್ವದ ಜ್ವಲಂತ ಉಧಾಹರಣೆಯಾಗಿವೆ.



Scanned by PDF Scanner

ಇನ್ನುಂದು ಕಡೆ ಸರ್ಚ ಬಹಳಷ್ಟು ಹಿಂದುಳಿದ ಜನರ ದನಿಯಾಗಲು ಬಾಗಲಕೋಟೆ ಜಿಲ್ಲೆಯ ಕೊನೆಯ ಹಳ್ಳಿ ಇಸ್ಲಾಮಪುರಕ್ಕೆ ಹೋಯಿತು. ಆ ಹಳ್ಳಿಗೆ ವಾಹನ ಚಲಿಸುವ ರಸ್ತೆ ಇರಲಿಲ್ಲ ಸರ್ಚನ ಕಾರ್ಯಕರ್ತರು ಮತ್ತು ಸ್ವ-ಸೇವಾ ಕಾರ್ಯಕರ್ತರು ರಸ್ತೆಯಲ್ಲಿನ ಕಲ್ಲುಗಳನ್ನು ತೆಗೆಯುತ್ತ ನಾವು ಆ ಹಳ್ಳಿಯನ್ನು ಮುಟ್ಟಲು ಅನುವುಮಾಡಿದರು. ಅದೊಂದು ಪುಟ್ಟ ಹಳ್ಳಿ. ಸುಮಾರು 250 ಕುಟುಂಬ ಇರುವಂತಹ ಹಳ್ಳಿ, ಎಲ್ಲ ಯುವಕರು ಮತ್ತು ದುಡಿಯಲು ಯೋಗ್ಯರಾದ ಜನ ಗೋವಾ ಪ್ರದೇಶಕ್ಕೆ ಕೆಲಸ ಹುಡಕಿಕೊಂಡು ಗುಳೆ ಹೋಗಿದ್ದರು ಹಳ್ಳಿಯಲ್ಲಿ ವಯೋವೃಧ್ಧರು, ಮಹಿಳೆಯರು ಮತ್ತು ಚಿಕ್ಕ ಬಾಲಕರಷ್ಟೇ ಇದ್ದರು. ಅಲ್ಲಿ ಆದಾಯ ಮೂಲದ ಯಾವ ಆರ್ಥಿಕ ಚಟುವಟಿಕೆಯು ಕಂಡು ಬರುತ್ತಿದ್ದಿಲ್ಲ ಅಲ್ಲಿನ ಜನರೆಲ್ಲಾ ಗುಳೆ ಹೋದ ಕೆಲಸಗಾರರು ಕಳಿಸುವ ಹಣದ ಮೇಲೆ ಅವಲಂಬಿತರಾಗಿದ್ದರು. ಇಂತಹ ಪರಸ್ಥಿತಿಯಲ್ಲಿ ಸರ್ಚ ಅಲ್ಲಿ 4 ಮಹಿಳಾ ಸ್ವ-ಸಹಾಯ ಗುಂಪುಗಳನ್ನು ರಚಿಸಿತು. ಅವರಿಗೆಲ್ಲಾ ಪಂಚಾಯತಿಯ ಕಟ್ಟಡದಲ್ಲಿ ವಾರಗಟ್ಟಲೆ ಅಗರಬತ್ತಿಯ ನಿರ್ಮಾಣದ ಬಗ್ಗೆ ತರಬೇತಿ ನೀಡಿತು. ಅಲ್ಲಿನ ಮಹಿಳೆಯರಾದರೂ ಉತ್ತಮ ಸ್ಪಂದನೆ ನೀಡಿ ವಾರಕ್ಕೆ ರೂಪೈ 2,00,000/- ಬೆಲೆಯ ಅಗರಬತ್ತಿ ತಯಾರಿಸಿದರು. ಐ.ಟಿ.ಸಿ, ಸೈಕಲ ಬ್ರ್ಯಾಂಡ ಅಗರಬತ್ತಿ ಕಂಪನಿ ಈ ಅಗರಬತ್ತಿಗಳನ್ನು ಖರೀದಿಸಿತೊಡಗಿದರು. ಸಿಂಡಿಕೆಟ್ ಬ್ಯಾಂಕ ಹುನುಗುಂದ ಶಾಖೆಯು ದುಡಿಯುವ ಬಂಡವಾಲದ ಸಾಲ ನೀಡಿತು.



ತಿಂಗಳಿಗೆ 8 ರಿಂದ 10 ಲಕ್ಷ ಹಣ ಆ ಹಳ್ಳಿಯಲ್ಲಿ ವಿನಮಯವಾಗುತ್ತಿದಂತೆ ಅಲ್ಲಿಯ ಹೆಣ್ಣು ಮಕ್ಕಳ ಶ್ರಮದ ಫಲ ಸುಮಾರು 2 ಲಕ್ಷ ರೂಪೈ ಪ್ರತಿ ತಿಂಗಳು ಅಲ್ಲಿ ಜಮೆಯಾಗ ತೊಡಗಿತು. ಸಿಂಡಿಕೇಟ್ ಬ್ಯಾಂಕಿನ ಸಾಲತೀರಿದ್ದಷ್ಟೇ ಅಲ್ಲ, ಸರ್ಕಾರ ಆ ಹಳ್ಳಿಯ ಸಂಪರ್ಕ ರಸ್ತೆಯನ್ನು ಸುಧಾರಿಸಿತು. ಮಕ್ಕಳಿಗಾಗಿ ಪ್ರಾಥಮೀಕ ಶಾಲೆ ಆರಂಭಗೊಂಡರೆ ಮಹಿಳೆಯರಿಗಾಗಿ ಆರೋಗ್ಯ ಇಲಾಖೆ ಎ.ಎನ್.ಎಮ್ ಕೇಂದ್ರವನ್ನು ಆರಂಭಿಸಿತು. ಇದರೊಟ್ಟಿಗೆ ಸರ್ಕಾರಿ ಬಸ್‌ಗಳು ಹುನುಗುಂದ ಮತ್ತು ಇಲಕಲ್ಲ ಶಹರಗಳನ್ನು ಸಂಪರ್ಕಿಸುವ ಸಲುವಾಗಿ ಆರಂಭವಾದವು.



Scanned by PDF Scanner



ಈಗಲು ಸರ್ಚ ಸಂಸ್ಥೆ ಆ ಗ್ರಾಮದ ಹೆಣ್ಣು ಮಕ್ಕಳ ಧ್ರುಡಮನಸು ಅವರ ಶ್ರಮವನ್ನು ಶ್ಲಾಘಿಸುತ್ತದೆ. ಇದರೊಟ್ಟಿಗೆ ಎಲ್ಲ ಸರ್ಕಾರಿ ಸಮನ್ವಯಾ ಅಧಿಕಾರಿಗಳು ಮತ್ತು ಬ್ಯಾಂಕುಗಳು, ಆಡಳಿತ ಅಧಿಕಾರಿಗಳು ಇವರ ನೇರವನ್ನು ನೆನೆಯುತ್ತದೆ. ಇಂತಹ ಸಮಗ್ರ ಗ್ರಾಮೀಣ ಅಭಿವೃದ್ಧಿಯತ್ತ ಸರ್ಚ ದಾಪುಗಾಲಿಂದ ಅವಸರಿಸುತ್ತದೆ.



ಬೇನಾಳ ಕಮತಗಿ ಪಟ್ಟಣದ ಪಕ್ಕದಲ್ಲಿರುವ ಒಂದು ಪುಟ್ಟ ಗ್ರಾಮ ಹೆಚ್ಚಾಗಿ ಕೃಷಿ ಕೂಲಿ ಕಾರ್ಮಿಕರು  ಇರುವಂತಹ ಒಂದು ಗ್ರಾಮ. ಅಲ್ಲಿ ಒಂದು ಸಾರಾಯಿ ಅಂಗಡಿ ಆರಂಭಿಸಲು ವ್ಯಕ್ತಿಯೋರ್ವರು ಸರ್ಕಾರದ ಪರವಾನಿಗಿ ತಂದು ಆರಂಭಿಸಲು ಅಣಿಯಾದರು.

ಆ ಗ್ರಾಮದಲ್ಲಿ ಹೆಚ್ಚಿನ ಅಂಶ ಮಹಿಳೆಯರು ಸ್ವ-ಸಹಾಯ ಗುಂಪುಗಳ ಸದಸ್ಯರು. ಅವರು ಈ ಯೋಜನೆಯನ್ನು ವಿರೋಧಿಸಿದರು. ಆ ಗ್ರಾಮದ ಯುವಕರು ಸಾರಾಯಿ ಚಟಕ್ಕೆ ದಾಸರಾಗಿ ಕುಟುಂಬ ವ್ಯವಸ್ಥೆ ಏರುಪೇರಾಗುತ್ತದೆ ಎಂಬುದು ಅವರ ಆತಂಕವಾಗಿತ್ತು. ಆದರೆ ಹಳ್ಳಿಯ ಕೆಲ ಪ್ರಭಾವಿ ವ್ಯಕ್ತಿಗಳಿಗೆ ಈ ಸಾರಾಯಿ ಅಂಗಡಿ ಪ್ರಾರಂಭವಾಗಬೇಕಿದ್ದದು ಪ್ರತಿಷ್ಠೆಯ ವಿಷಯವಾಗಿತ್ತು. ಯಾವುದೇ ಕಾರಣಕ್ಕೂ ಸಾರಾಯಿ ಅಂಗಡಿ ಆರಂಭವಾಗಬಾರದು ಎನ್ನುವುದು ಅಲ್ಲಿನ ಮಹಿಳೆಯರ ನಿಲುವು ಆಗಿತ್ತು. ಆದರೆ ಸರ್ಕಾರಿ ಅಧಿಕಾರಿಗಳು ಮಹಿಳೆಯರ ಪ್ರತಿಭಟನೆಯನ್ನು ಕಡೆಗಣಿಸಿ ಸಾರಾಯಿ ಅಂಗಡಿಯನ್ನು ಆರಂಭಿಸಿಯೆಬಿಟ್ಟರು ಆಗ ಅಲ್ಲಿನ ಖಾಜಾ ಅಮೀನ ಸ್ವ-ಸಾಹಯ ಗುಂಪಿನ ಸದಸ್ಯರು ಉಪವಾಸ ಸತ್ಯಗ್ರಹ ಆರಂಭಿಸಿದರು. ಶ್ರೀಮತಿ ಮಲ್ಲಮ್ಮ ವಾಲೀಕಾರ ಎಂಬ ವಯೋವೃದ್ಧ ಸದಸ್ಯೆಯ ಆರೋಗ್ಯ 3 ದಿನಗಳ ನಿರಂತರ ಉಪವಾಸದಿಂದ ಹದಗೆಟ್ಟಿತ್ತು. ಹಳ್ಳಿಯ ಜನ ಕಂಗಾಲಾಗಿ ಉದ್ರಿಕ್ತ ಪ್ರಸ್ಥಿತಿ ನಿರ್ಮಾಣವಾಯಿತು. ಆಗ ಬೇರೆ ದಾರಿ ಕಾಣದೇ ತಾಲೂಕ ಆಡಳಿತ ಅಧಿಕಾರಿ ಆ ಹಳ್ಳಿಗೆ ಬಂದು ಸಾರಾಯಿ ಅಂಗಡಿಯ ಪರವಾನಗಿ ಹಿಂಪಡೆದಿರುವುದಾಗಿ ಘೋಷಿಸಿದರು. ಒಬ್ಬ ಅಶಿಕ್ಷಿತ ಗಾಮೀಣ ವೃದ್ಧೆ ಸಾಮಾಜದ ಕಂಟಕವನ್ನು ನಿವಾರಿಸಲು ತನ್ನ ಜೀವದ ಹಂಗುತೊರೆದು ಹೋರಾಡಿದರು ಅದಕ್ಕೆ ತಕ್ಕ ಯಶಸ್ಸು ಬಂತು ಇದು ಸ್ವ-ಸಹಾಯ ಗುಂಪುಗಳ ನಾಯಕತ್ವದ ಫಲ ಸರ್ಚ ಯಾವಾಗಲೂ ಈ ಕಾರ್ಯಕರ್ತರ ಜೊತೆ ಇದ್ದು ಮಾರ್ಗದರ್ಶನ ಮಾಡುತ್ತಲೇ ಇದೆ. ಇಂತಹದೇ ವರದಿಗಳು ಚಿಕ್ಕನಾಳ, ಭೀಮನಗಡ, ಮತ್ತು ಗುಡುರ ಪಕ್ಕದ ಹಳ್ಳಿಗಳಿಂದ ಬಂದಿದ್ದು ಕಿತ್ತೂರ ರಾಣಿ ಚನ್ನಮ್ಮ ಸ್ವ-ಸಹಾಯ ಗುಂಪುಗಳ ಒಕ್ಕೂಟ ಇಂತಹ ಅನೀಷ್ಟಕಾರಿ ಬೆಳವಣಿಗೆಗಳನ್ನು ತಡೆಯುವಲ್ಲಿ ನಿರ್ಣಾಯಕ ಪಾತ್ರವಹಿಸಿದೆ. ಸರ್ಚ ಇವರೇನೆಲ್ಲಾ ಅಭಿವಂದಿಸುತ್ತದೆ.




ಈ ಯಶಸ್ವೀ ಕಥೆಗಳು ಕೇವಲ ಉದಾಹರಣೆಗಾಗಿ ಮಾತ್ರ ಮತ್ತು ಮೂರ್ಣ ಪ್ರಮಾಣದ ವರದಿ ಅಲ್ಲ.

ಈ ಸ್ವ-ಸಹಾಯ ಸಂಘಗಳ ಸದಸ್ಯರನ್ನು ವಿವಿಧ ರೀತಿಯ ವ್ಯಾಪಾರ ವ್ಯವಹಾರ ಮತ್ತು ವಸ್ತುಗಳ ತಯಾರಿಕಗಳ ಬಗ್ಗೆ ತರಬೇತಿ ನೀಡುವಾಗ ಸರ್ಚ ಸಂಸ್ಥೆಯು ಎಂಟ್ರಪ್ರೇನರ್ ಶೀಪ್ ಡೇವಲ್ಪಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ (ಭಾರತೀಯ ಉದ್ಯಮ ಶೀಲತಾ ತರಬೇತಿ ಸಂಸ್ಥೆ) ಎಂಬ ಕೇಂದ್ರ ಸರ್ಕಾರದ ಅಹಮದಾಬಾದ್ ಗುಜರಾತನಲ್ಲಿ ನಲೆಗೊಂಡಿರುವ ಸಂಸ್ಥೆಯ ಸಂಪರ್ಕದಲ್ಲಿ ಬಂದಿತು. ಈ ಸಂಸ್ಥೆಯು ಸರ್ಚನ ಕೆಲಸಗಾರರು ಕಾರ್ಯಕರ್ತರು ಹಾಗೂ ಸ್ವಯಂ ಸೇವಾ ಕಾರ್ಯಕರ್ತರುಗಳನ್ನು ತರಬೇತು ಮಾಡಿತು. ನಂತರದ ದಿನಗಳಲ್ಲಿ ಈ ರೀತಿ ತರಬೇತಿ ಪಡೆದ ಕಾರ್ಯಕರ್ತರು ಸ್ವ-ಸಹಾಯ ಗುಂಪಿನ ಸದಸ್ಯರಿಗೆ ತರಬೇತಿ ನೀಡಿದರು.

ಈ ಅವಧಿಯಲ್ಲಿ ಸರ್ಚನ ಶ್ರಮಕ್ಕೆ ಈ ಕೇಂದ್ರ ಸರ್ಕಾರದ ಸಂಸ್ಥೆಯಿಂದ ತುಂಬಾ ಉತ್ತಮ ಪ್ರತಿಕ್ರಿಯೆ ದೊರೆಯಿತು. ಇದರಿಂದಾಗಿ ಸರ್ಚ ಸಂಸ್ಥೆಯು ತನ್ನ ಕಾರ್ಯಕ್ಷೇತ್ರ ಅಲ್ಲದೆ ಗೋವಾ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಗಡಿ ಭಾಗದ ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ಉದ್ಯಮ ಶೀಲತಾ ತರಬೇತಿ ನೀಡಲು ಆಯ್ಕೆ ಗೊಂಡಿತ್ತು, ಅಕ್ಸೆಂಚರ್ ಎಂಬ ತತ್ರಾಂಶ ಕಂಪನಿ ಉದ್ಯಮ ಶೀಲತಾ ತರಬೇತಿ ಮತ್ತು ಆಯ್ದ ಸ್ವ-ಸಹಾಯ ಗುಂಪುಗಳಿಗೆ ದುಡಿಯುವ ಬಂಡವಾಲ ಸಹಾಯವನ್ನು ಮಾಡಿತು. ಈ ತರಬೇತಿ ಮತ್ತು ಅಕ್ಸೆಂಚರ್ ಯೋಜನೆಯಿಂದ ನಮ್ಮ ಅಮೀನಗಡ, ಇಲಕಲ್ಲ, ಹುನಗುಂದ ಕಮತಗಿ, ಬದಾಮಿ, ದೋಟಿಹಾಳ, ಕುಷ್ಟಗಿ, ನರೇಗಲ ಮತ್ತು ಶಿರೋಳ ನಂತಹ ಅನೇಕ ಹಳ್ಳಿಗಳ ಸ್ವ-ಸಹಾಯ ಗುಂಪುಗಳು ಈಗಲೂ ಉದ್ಯಮ ಶೀಲರಾಗಿ ವ್ಯಾಪಾರ, ವ್ಯವಹಾರಗಳನ್ನು ನಡೆಸುತ್ತಿದ್ದು ಫ್ಲಾಸ್ಟಿ ಬ್ಯಾಗ್ ತಯಾರಿಕೆ, ತಿಂಡಿ ತಿನಿಸುಗಳು ಮಾರಾಟಕ್ಕೆ ತಯಾರಿಕೆ, ರೊಟ್ಟಿ ದೊಡ್ಡ ಪ್ರಮಾಣದಲ್ಲಿ ತಯಾರಿಸುವುದು ಇಂತಹ ಅನೇಕ ಸಣ್ಣ ಪುಟ್ಟ ಚಟುವಟಿಕೆಗಳಲ್ಲಿ ಯಶಸ್ವಿಯಾಗಿ ತೊಡಗಿಕೊಂಡಿದ್ದಾರೆ.



ಈ ಚಟುವಟಿಕೆಗಳಿಗಾಗಿ ಸರ್ಚ ನ್ಯಾಬಫಿನ್ ಕಾರ್ಪೋರೇಷನ್ನ ನಂತರ . ಐ.ಸಿ.ಐ.ಸಿ.ಐ ಬ್ಯಾಂಕ ಜೊತೆ ಒಪ್ಪಂದ ಮಾಡಿಕೊಂಡು ನಮ್ಮ ಸ್ವ-ಸಹಾಯ ಗುಂಪುಗಳ ಕ್ರೀಯಾ ಶೀಲ ಸದಸ್ಯರಿಗೆ ಬಂಡವಾಲ ತೊಂದರೆಯಾಗದಂತೆ ಸಾಲ ಒದಗಿಸಲು ಪ್ರಯತ್ನಿಸಿತು. ಆದರೆ, ನಮ್ಮೊಳಗಿನ ಕೆಲ ಸದಸ್ಯರು ವ್ಯವಸ್ಥೆಯ ದುರುಪಯೋಗ ಪಡೆದಿದ್ದರಿಂದ ಸರ್ಚ ಈ ಹಣಕಾಸು ವ್ಯವಾಹರ ಪರಿಣಿತಗೇ ಸರಿ ಎಂಬ ನಿಲುವು ತಳೆಯ ಬೇಕಾಯಿತು.



Scanned by PDF Scanner

# ಈಗ ಬಂದಿತು ಸರ್ಚ ಸಂಸ್ಥೆಯ ಸುವರ್ಣ ಕಾಲ

ನಮ್ಮ ಚಟುವಟಿಕೆಗಳು, ಒಂದೂವರೆ ದಶಕದಿಂದ ಸಂಸ್ಥೆ ಮಾಡಿದ ಜನ ಸೇವೆ, ಸರ್ಕಾರ, ಇತರ ರಾಷ್ಟ್ರೀಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಜೊತೆಗೂಡಿ ಬಾಲಕಾರ್ಮಿಕ ಪದ್ದತಿ ವಿರುಧ್ಧ ನಿರ್ಮೂಲನೆಗಾಗಿ ಆಂದೋಲನ (ಸಿ.ಎ.ಸಿ.ಎಲ್ ಜೊತೆ ಗೂಡಿ ) ಸರ್ಕಾರಿ ಕಾರ್ಯಕ್ರಮಗಳಾದ ದೇವದಾಸಿ ಪದ್ಧತಿ ನಿರ್ಮೂಲನೆ, ಏಡ್ಸ್ ರೋಗದ ಬಗ್ಗೆ ಪ್ರಚಾರ ಅಂದೋಲನ, ಕೆಳಸ್ಥರದ ಸಮುದಾಯಗಳನ್ನು ಆರ್ಥಿಕವಾಗಿ ಸಬಲೀಕರಿಸುವಿಕೆ, ಮಕ್ಕಳ ಹಕ್ಕುಗಳ ಬಗ್ಗೆ ಆಂದೋಲನ ಸರ್ಚ ಸಂಸ್ಥೆಯನ್ನು ಮತ್ತಷ್ಟೂ ಜನಸ್ನೇಹಿ, ಜನಪರವನ್ನಾಗಿಸಿದವು. ಸರ್ಚ ಈ ಹಿನ್ನಲೆಯಲ್ಲಿ ಒದಗಿದ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸಿ ಆಯಾ ಯೋಜನೆಗಳು, ಕಾರ್ಯಕ್ರಮಗಳು ಸರ್ಚ ಸಂಸ್ಥೆಯನ್ನು ಜನರ ಮಧ್ಯದಲ್ಲಿ ಇರುವಂತೆ ನೋಡಿಕೊಂಡಿತು.

ಇವು ಎಲ್ಲವುಗಳ ಪರಿಣಾಮವಾಗಿ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸರ್ಚ ಸಂಸ್ಥೆಯನ್ನು ಬೆಳಗಾವಿ ವಿಭಾಗದ ಅತ್ಯುತ್ತಮ ಸ್ವಯಂ ಸೇವಾ ಸಂಸ್ಥೆ ಎಂದು 2007–08ರ ಸಾಲಿಗೆ ಘೋಷಿಸಿತು ಅದರಂತೆ 2007–08ರ ಕಿತ್ತೂರ ರಾಣಿಚೆನ್ನಮ್ಮ ರಾಜ್ಯ ಪ್ರಶಸ್ತಿಗೆ ಸರ್ಚ ಸಂಸ್ಥೆಯು ಭಾಜನವಾಯಿತು. ಅಂದಿನ ರಾಜ್ಯ ಮುಖ್ಯಮಂತ್ರಿಗಳಾಗಿದ್ದ ಗೌರವಾನ್ವಿತ ಶ್ರೀ ಬಿ.ಎಸ್.ಯಡಿಯೊರಪ್ಪನವರು 2009ರಲ್ಲಿ ಈ ಪ್ರಶಸ್ತಿಯನ್ನು ಕೊಡಮಾಡಿದರು.




2020–21ರಲ್ಲಿ “Indian Empire University Chennai” ಇವರು ಶ್ರೀಮತಿ ಮಂಜುಳಾ .ವಾಯ್. ಜೋಶಿ ಇವರಿಗೆ ಸಮಾಜ ಸೇವೆಯನ್ನು ಗುರುತಿಸಿ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿರುತ್ತದೆ. ಅದರಂತೆ ಶ್ರೀ. ಎಂ. ವೆಂಕಟೇಶ ಇವರಿಗೆ ಸಮಾಜ ಸೇವೆಯನ್ನು ಗುರುತಿಸಿ “ಸೇವಾ ರತ್ನ” ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.



Scanned by PDF Scanner



2010ರಲ್ಲಿ ಸರ್ಚ ಸಂಸ್ಥೆ ಸೇವಾ ವಿಭಾಗದಲ್ಲಿ ಮುಂಚೂಣಿಯಲ್ಲಿ ಇದ್ದದ್ದರಿಂದ, ಕೇಂದ್ರ ಸರ್ಕಾರ ಬಾಗಲಕೋಟೆ ಜಿಲ್ಲಾ ದತ್ತು ಕೇಂದ್ರವನ್ನು ನಡೆಸಲು ಸರ್ಚ ಸಂಸ್ಥೆಯನ್ನು ಆರಿಸಿತು. ಈ ಸಂಸ್ಥೆಯು ನಮ್ಮ ಜಿಲ್ಲೆಯ 0–6 ವರ್ಷಗಳ ಅನಾಥ ಮಕ್ಕಳನ್ನು ಪೋಷಿಸುವುದಲ್ಲದೇ, ಕೇಂದ್ರ ಸರ್ಕಾರದ ಕಾಯ್ದೆಗಳ ಅನ್ವಯ ಮಕ್ಕಳು ಇಲ್ಲದ ದಂಪತಿಗಳಿಗೆ ದತ್ತು ನೀಡುವ ಪ್ರಕ್ರೀಯೆ ನಡೆಸುತ್ತದೆ.











Scanned by PDF Scanner

ಕಳೆದ 12 ವರ್ಷಗಳಲ್ಲಿ ನಮ್ಮ ದತ್ತು ಕೇಂದ್ರವು ಜನ ಸಾಮನ್ಯರಲ್ಲದೆ ಸರ್ಕಾರಿ ಅಧಿಕಾರಿಗಳಿಂದಲೂ ಬಹಳಷ್ಟು ಪ್ರಶಂಸೆಗೆ ಪಾತ್ರವಾಗಿದೆ. ಅಲ್ಲದೆ ಸಮೀಪದ ಜಿಲ್ಲೆಗಳ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ದತ್ತು ಕೇಂದ್ರಗಳ ಜವಾಬ್ದಾರಿಯನ್ನು ಸರ್ಚ ಸಂಸ್ಥೆ ವಹಿಸಿಕೊಳ್ಳುವಂತೆ ಕೇಳಿದ್ದಾಗಿದೆ. ಈವರೆಗೆ ನಮ್ಮ ದತ್ತು ಕೇಂದ್ರವು 119 ಮಕ್ಕಳ ದತ್ತು ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಿಭಾಯಿಸಿದೆ. ಈ ಸಂಖ್ಯೆಯಲ್ಲಿ ನಾಲ್ಕು ಮಕ್ಕಳು ಅಮೇರಿಕೆ ದೇಶಕ್ಕೆ ದತ್ತು ಹೋಗಿದ್ದರೆ, ಒಂದು ಮಗು ಯುರೋಪಗೆ ಹೋಗಿದೆ.

ನಮ್ಮ ದಾನಿಗಳು, ಕಾರ್ಪೋರೇಟ್ ದಾನಿಗಳು ವೈಯಕ್ತಿಕ ದಾನಿಗಳ ದೊಡ್ಡ ಪ್ರಮಾಣದ ದಾನಗಳಿಂದಾಗಿ ನಮ್ಮ ಸಂಸ್ಥೆ ವಿಶಾಲವಾದ ಸೇವಾಸದನ ಎಂಬ ಕಟ್ಟಡವನ್ನು ಹೊಂದಿದೆ ಈ ಕಟ್ಟಡದಲ್ಲಿ ದತ್ತು ಕೇಂದ್ರ, ಸರ್ಚನ ಕಛೇರಿ, ಐಶ್ವರ್ಯ ಕ್ರೆಡಿಟ್ ಸೊಸೈಟಿಯ ಕಛೇರಿ ಅಲ್ಲದೆ ನಮ್ಮ ಕಾರ್ಯಕರ್ತರ ಅನುಕೂಲಕ್ಕಾಗಿ ಸಭಾಗೃಹವನ್ನು ಹೊಂದಿದೆ. ಸರ್ಚ ಈ ಸಮಯದಲ್ಲಿ ತನ್ನ ಎಲ್ಲಾ ಹಿತೈಷಿಗಳು, ದಾನಿಗಳು ಮತ್ತು ಮಾರ್ಗದರ್ಶಕರನ್ನು ಕೃತಜ್ಞತೆಯಿಂದ ನೆನೆಯುತ್ತದೆ.



ಈ ವೇಳೆಗೆ ಸರ್ಚ ಸಂಸ್ಥೆ ಇದುವರಿಗೆ ಕಾಲಿಡದ ಕ್ಷೇತ್ರವೊಂದನ್ನು ಸೇವೆಗಾಗಿ ಆಯ್ಕೆ ಮಾಡಿಕೊಂಡಿತು. ಅದು ಆ ಸಮಯದ ಕರೆಯೂ ಆಗಿತ್ತು.

ಸರ್ಚ ಸಂಸ್ಥೆ ಬೆಂಗಳೂರಿನ ಅಸೋಷಿಯೆಷನ್ ಆಫ್ ಪೀಪಲ್ಸ ವಿತ್ತ ಡಿಸೇಬಲಿಟಿ ಎಂಬ ಸಂಸ್ಥೆಯ ಜೊತೆಗೂಡಿ ವಿಕಲಾಂಗರಿಗಾಗಿ ಸೇವೆ ನೀಡಲು ಮುಂದಾಯಿತು. ದಿವ್ಯಾಂಗರಿಗೆ ನವಕರಿಗಳಲ್ಲಿ ಇರುವ ಅವಕಾಶಗಳು ಮತ್ತು ಅದಕ್ಕಾಗಿ ಅವರು ಮಾಡಬೇಕಾದ ಮಾನಸಿಕ ಮತ್ತು ಶೈಕ್ಷಣಿಕ ತಯಾರಿಗಳು–ಈ ಕುರಿತಾಗಿ ನಮ್ಮ ಸಂಸ್ಥೆಯು ದೃಷ್ಟಿಕೋನದ ಮೂಲ ತರಬೇತಿಗಳನ್ನು ನೀಡಲಾರಂಭಿಸಿತು. 03 ವರ್ಷಗಳ ಈ ಯೋಜನೆಯ ಉದ್ದಕ್ಕೂ ನಡೆದ ತರಬೇತಿ ಶಿಬಿರಗಳಲ್ಲಿ 1200ಕ್ಕೂ ಹೆಚ್ಚು ಜನ ದಿವ್ಯಾಂಗಿನಿಯರಿಗೆ ತರಬೇತಿ ನೀಡಿದ ಹೆಗ್ಗಳಿಕೆ ನಮ್ಮ ಸಂಸ್ಥೆಯದಾಗಿದೆ. 800ಕ್ಕೂ ಹೆಚ್ಚು ಜನ ಈ ರೀತಿ ತರಬೇತಿ ಪಡೆದ ವಿಕಲಚೇತನರು ಬೇರೆ ಬೇರೆ ಕಡೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕಛೇರಿಗಳು, ಕಾರ್ಖಾನೆಗಳು, ವ್ಯಾಪಾರಿ ಮಾಲಗಳು, ಕಂಪ್ಯೂಟರ್ ತರಬೇತಿ ಮಳಿಗೆಗಳು ಈ ವಿಕಲಚೇತನರಿಗೆ ಸೇವೆ ಸಲ್ಲಿಸುವ ಅವಕಾಶ ಒದಗಿಸಿದ್ದಾರೆ. 7ನಮ್ಮ ಭಾಗದ ಹಳ್ಳಿಗಳಲ್ಲಿನ ವಿಕಲಚೇತನರ ಪೋಷಕರ ಮನೋಭಾವವನ್ನು ಬದಲಾಯಿಸಿ, ದಿವ್ಯಾಂಗಿನಿಯರ ಬಗ್ಗೆ ಇದ್ದ ಉದಾಸೀನತೆಯನ್ನು ಕೊಡವಿ ಅವರು ಕೂಡ ಇತರ ಮಕ್ಕಳಂತೆ ಸಮಾಜದ ಆಸ್ತಿಯಾಗ ಬಲ್ಲರು ಎಂಬ ಸ್ಥೈರ್ಯವನ್ನು ಈ ಕುಟುಂಬಗಳಲ್ಲಿ ನಮ್ಮ ಸಂಸ್ಥೆ ತುಂಬಿದೆ ಎಂದು ತಿಳಿಸಲು ಹೆಮ್ಮೆಯನ್ನಿಸುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಈ ರೀತಿ ಸೇವಾ ಅವಕಾಶ ಪಡೆದ ವಿಕಲಚೇತನರು ತಮ್ಮ ಕುಟುಂಬಗಳ ಜೀವನ ವೆಚ್ಚ ನೋಡಿಕೊಳ್ಳುವ ದಾರಿ ದೀಪವಾಗಿದ್ದಾರೆ.

ವಿಕಲಚೇತನರ ಸೇವೆಯಲ್ಲಿ ಇರುವಾಗಲೆ ಸರ್ಚ ಸಂಸ್ಥೆ ಧ್ವನಿ ಫೌಂಡೇಷನ್‌ನ ಸಂಪರ್ಕದಲ್ಲಿ ಬಂತು. ಧ್ವನಿ ಸಂಸ್ಥೆಯ ಕರ್ನಾಟಕದ ಸ್ವಯಂ ಸೇವಾ ಸಂಸ್ಥೆಗಳ ಸಬಲೀಕರಣದ ಕಾರ್ಯಕ್ಷೇತ್ರದಲ್ಲಿ ತೊಡಗಿಕೊಂಡಿರುವ ಸಂಸ್ಥೆ. ಸರ್ಚ ಸಂಸ್ಥೆಯ ಆಡಳಿತ ವಿಧಾನವನ್ನು, ಸ್ವಯಂ ಸೇವಾ ಸಂಸ್ಥೆಗಳು ಪಾಲಿಸ–ಬೇಕಾಗಿರುವ ಕಾನೂನಿನ ಅರಿವು, ಕಾರ್ಪೋರೇಟ್ ದಾನಿಗಳಿಂದ ನಮ್ಮ ನಿರ್ದಿಷ್ಟ ಯೋಜನೆಗಳಿಗೆ ಧನ ಸಹಾಯ ಪಡೆಯುವ ವಿಧಾನ, ಎಲ್ಲವನ್ನು ಸಮಯ ಬದ್ಧವಾಗಿ ಕಾರ್ಯಗೊಳಿಸಲು ಬೇಕಾಗುವ ತಂತ್ರಜ್ಞಾನದ ಅವಶ್ಯಕತೆ–ಈ ವಿಷಯಗಳ ಬಗ್ಗೆ 3 ವರ್ಷಗಳ ಕಾಲ ನಮ್ಮ ಸಂಸ್ಥೆಯಿಂದ ಯಾವದೇ ಹಣ ಕಾಸು ನಿರೀಕ್ಷಿಸದೆ ತಮ್ಮ ಖರ್ಚಿನಲ್ಲಿಯೆ ಒಂದು ಮಾನದಂಡದ ಪ್ರಕಾರ ಸ್ವಯಂ ಸೇವಾ ಸಂಸ್ಥೆಗಳ ಸಬಲೀಕರಣಕ್ಕಾಗಿ ಪ್ರಯತ್ನಿಸಿದರು. ಸರ್ಚ ಸಂಸ್ಥೆ ಇದರ ಅಪಾರ ಸಹಾಯ ಮಾರ್ಗದರ್ಶನ ಹೊಂದಿತು.

ವಿಕಲಚೇತನರ ಸೇವೆಯಲ್ಲಿ ಇರುವಾಗಲೇ ಗಿಫ್ಟೇಬಲ್ ಇಂಡಿಯಾ ಎಂಬ ಬೆಂಗಳೂರಿನ ಸಂಸ್ಥೆ ನಮ್ಮ ಸಂಸ್ಥೆಯೊಂದಿಗೆ ಸಹಕರಿಸಿ ಕಮತಗಿಯಲ್ಲಿ ವಿಕಲಾಂಗಿನಿಯರಿಗಾಗಿ ಫ್ಯಾನ್ಸಿ ಬ್ಯಾಗ ತಯಾರಿಕ ತರಬೇತಿಯನ್ನು ನೀಡಿದರು. ನಮ್ಮ ಭಾಗದ ಸುಮಾರು 100 ಜನ ವಿಕಲಚೇತನಿಯರು ಇದರ ಪ್ರಯೋಜನ ಪಡೆದುಕೊಂಡರು.





ಧನ್ಯವಾದಗಳು : ಧ್ವನಿ ಫೌಂಡೇಷನ್ ಬೆಂಗಳೂರು, ಗಿಫ್ಟೇಬಲ್ ಇಂಡಿಯಾ ಬೆಂಗಳೂರ, ಎನೋಬಲ್ ಇಂಡಿಯಾ ಬೆಂಗಳೂರು, ಎ.ಪಿ.ಡಿ ಬೆಂಗಳೂರು ಇವರೆಲ್ಲಾ ನಮ್ಮ ಭಾಗದ ವಿಕಲಚೇತನರಿಗೆ ಸೇವಾ ಕ್ಷೇತ್ರದಲ್ಲಿ ಕೆಲಸ ಮಾಡಲು ಅಗತ್ಯವಾಗಿರುವ ಅರ್ಹತೆಗಳ ಬಗ್ಗೆ ತರಬೆತಿ ನೀಡುವುದಲ್ಲದೆ, ಈ ತರದ ಕೆಲಸಗಾರರಿಗೆ ಬೇಡಿಕೆ ಇರುವ ಪ್ರದೇಶಗಳನ್ನು ಗುರುತಿಸಿ ಅವಕಾಶಗಳನ್ನು ಒದಗಿಸುವಲ್ಲಿ, ಮಹತ್ತರವಾದ ಪಾತ್ರವನ್ನು ನಿರ್ವಹಿಸಿದೆ. ಮುಂಬರುವ ದಿನಗಳಲ್ಲಿ ಸರ್ಚ ಸಂಸ್ಥೆ ಈ ಕ್ಷೇತ್ರದಲ್ಲಿ ಇನ್ನಷ್ಟೂ ಉತ್ತಮ ಸೇವೆ ನೀಡುವ ಯೋಜನೆ ಹಾಕಿಕೊಳ್ಳುತಲಿದೆ.



Scanned by PDF Scanner




ಸರ್ಚ ಸಂಸ್ಥೆ 2016 ರಲ್ಲಿ ಬಾಗಲಕೋಟೆ ಜಿಲ್ಲಾದ್ಯಂತೆ ಶಾಲೆಯಿಂದ ಹೊರಗೂಳಿದ ಮತ್ತು ಬಾಲಕಾರ್ಮಿಕರ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸುವ ಉದ್ದೇಶದಿಂದ ಮಹಿಳೇಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕೂಗಳ ರಕ್ಷಣಾ ಆಯೋಗ ಜಿಲ್ಲಾ ಮತ್ತು ತಾಲೂಕ ಕಾನೂನು ಸೇವೆಗಳ ಪ್ರಾಧಿಕಾರ ಇವರಗಳು ಸಂಯೋಗದಲ್ಲಿ "ಶಾಲೆ ಕಡೆ ನನ್ನ ನಡೆ" ಎಂಬ ದೊಡ್ಡ ಮಟ್ಟದಲ್ಲಿ ಆಂದೋಲನ ನಡೆಸಿ ಏಪ್ರಿಲ್1–2016 ರಿಂದ ಮೇ30–2016 ರವರಿಗೆ ಎಲ್ಲ ಇಲಾಖೆಗಳನ್ನು ಒಟ್ಟು ಗೂಡಿಸಿ ಕಾರ್ಯಕ್ರಮವನ್ನು ಯಶ್ವಸಿಯಾಗಿ ನಡೆಸಿ ಅದರಲ್ಲಿ 4906 ಮಕ್ಕಟನ್ನು ಗುರುತ್ತಿಸಿ ಮುಖ್ಯವಹಿನಿಗೆ ಸೇರಿಸುವಂತಹ ಕ್ರಮ ಕೈ ಗೂಂಡಿರುತ್ತವೆ. ಈ ಮುಖಂತರ, ಪ್ರತಿಯೊಂದು ಹಳ್ಳಿಗಳಿಗೆ ಮಕ್ಕಳ ಹಕ್ಕುಗಳ ಬಗ್ಗೆ ವ್ಯಾಪಕವಾಗಿ ಪ್ರಚಾರ ಮಾಡುವ ಮೂಲಕ ಬಾಲಕಾರ್ಮಿಕ ಮತ್ತು ಬ್ಯಾಲವಿವಾಹ ಪದ್ದತಿಯನ್ನು ನಿಯಂತ್ರಿಸಲು ಪ್ರಯತ್ನನಿಸಲಾಗಿರುತ್ತದೆ.





ಸರ್ಚ್ ಸಂಸ್ಥೆ ಮತ್ತು ಇಸಿಲೊರ್ ವಿಜನ್ ಪೌಂಡೆಶನ ಬೆಂಗಳೂರು ಮತ್ತು ಆರೋಗ್ಯ ಇಲಾಖೆ ಇವರ ಸಂಯೋಗದಲ್ಲಿ ಬಾಗಲಕೋಟೆ ಜಿಲ್ಲೆಯ ,ಬದಾಮಿ,ಹುನಗುಂದ, ಮತ್ತು ಮುಧೋಳ ತಾಲ್ಲುಕುಗಳಲ್ಲಿ ಸರ್ಕಾರಿ ಶಾಲೆಯ 1 ರಿಂದ 10 ನೇ ತರಗತಿ ಮಕ್ಕಳಿಗೆ ಉಚಿತ ಕಣ್ಣು ತಪಾಸನೆ ಮತ್ತು ಕಣ್ಣಿನ ತೊಂದರೆ ಇರುವ ಮಕ್ಕಳಿಗೆ ಉಚಿತವಾಗಿ ಚಿಕ್ಸಿತೆ ಮತ್ತು ಕನ್ನಡಿಕಗಳನ್ನು ಕೊಡುವ ಉದ್ದೇಶದಿಂದ, ಪ್ರಾರಂಭದಲ್ಲಿ ಈ 3 ತಾಲುಕಗಳಲ್ಲಿನ ಶಾಲೆಗಳಲ್ಲಿರುವ, ದೈಹಿಕ ಮತ್ತು ವಿಜ್ಞಾನ ಟೀಚರ್ಸ್‌ಗಳಿಗೆ ಮಕ್ಕಳ ಕಣ್ಣು ತಪಾಸಣೆ ವಿಚಾರವಾಗಿ ತಲೂಕ ಮತ್ತು ವಲಯ ಮಟ್ಟದಲ್ಲಿ ತರಬೇತಿಯಗಳನ್ನು ನಡೆಸಿ ಅದಕ್ಕೆ ಸಂಭಂದ ಪಟ್ಟಿ ಸಾಮಗ್ರಿಗಳನ್ನು ಪೊರೈಹಿಸಲಾಗಿರುತ್ತದೆ ಮೊದಲನೇ ಹಂತದಲ್ಲಿ ಶಿಕ್ಷಕರು ಮಕ್ಕಳನ್ನು ತಪಾಸನೆ ಮಾಡಿ ಗುರುತ್ತಿಸಿರುವ ಮಕ್ಕಳ ಪಟ್ಟಿ ಮಾಡಿ ಆರೋಗ್ಯ ಇಲಾಖೆಗೆ  ಕಳಹಿಸಿ ಕೊಡುವುದು. ನಂತರ ಆರೋಗ್ಯ ಇಲಾಖೆಯ ವೈದ್ಯರು ಶಾಲೆಗೆ ಬೇಟಿ ನೀಡಿ ಮಕ್ಕಳನ್ನು ತಪಾಸಣೆ ಮಾಡಿ ಅವರು ನಮ್ಮ ಸಂಸ್ಥಗೆ ಪಟ್ಟಿ ತಯಾರಿಸಿ ಕೊಡುವುದು. ನಂತರ ಆ ಮಕ್ಕಳಿಗೆ ಉಚಿತವಾಗಿ ಕನ್ನಡಕಗಳನ್ನು ಕೊಡಲಾಗಿರುತ್ತದೆ. ಇದನ್ನು 3 ತಾಲ್ಲುಕುಗಳಲ್ಲಿ ಅಂದಾಜು. 4800 ಮಕ್ಕಳಿಗೆ ಕನ್ನಡಕಗಳನ್ನು ವಿತರಣೆ ಮಾಡುವ ಕ್ರಮ ಕೈ ಗೊಳ್ಳಲಾಗಿರುತ್ತದೆ. ಕೆಲವು ಮಕ್ಕಳಿಗೆ ತುಂಬಾ ಕಣ್ಣಿನ ತೊಂದರೆ ಇರುವಂತಹ ಮಕ್ಕಳನ್ನು ಹೆಚ್ಚಿನ ಚಿಕ್ಸಿತೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕ್ಸಿತೆಕೊಡಿಸುವ ಕ್ರಮ ಕೈ ಗೊಂಡಿರುತ್ತೆವೆ.



## ಸಮುದಾಯ ಭಾಗವಹಿಸುವಿಕೆ ಅಂತರ ಜಲ ಮಟ್ಟ ಹೆಚ್ಚಿಸುವ ಕಾರ್ಯಕ್ರಮ

ಗ್ರಾಮೀಣ ಪ್ರದೇಶದ ಜನರಲ್ಲಿ ಅಂತರ ಜಲ ಮಟ್ಟ ಹೆಚ್ಚಿಸಲು ಮತ್ತು ಸಮೂದಾಯದ ಮೂಲಭೂತ ಸೌಲಭ್ಯಗಳಲ್ಲಿ ಒಂದಾದ ಕೆರೆಗಳ, ಪುನಶ್ಚೇತನ ಯೋಜನೆಯನ್ನು ಬದಾಮಿ ತಾಲ್ಲೂಕಿನ ಲಿಂಗಾಪೂರ, ಗುಳೇದಗುಡ್ಡ, ರೇಲ್ವೆಸ್ಟೇಶನ ಮತ್ತು ತೆಗ್ಗಿ ಗ್ರಾಮಗಳಲ್ಲಿ 800 ಜನಸೇರಿ ತಮ್ಮ ತಮ್ಮ ಗ್ರಾಮಗಳಲ್ಲಿರುವ ಕೆರೆಗಳನ್ನು ಸ್ವಚ್ಛ ಮಾಡಿ ಉಳುತ್ತೆವೆ ಕೆಲಸವನ್ನು ಸಾಮೂಹಿಕವಾಗಿ ಮಾಡಿರುತ್ತಾರೆ. ಆದ್ದರಿಂದಾಗಿ ಮಳೆಗಾಲದಲ್ಲಿ ಕೆರೆಗಳು, ತುಂಬಿದ ನಂತರ ಗ್ರಾಮದ ದನಕರುಗಳಿಗೆ ಕುಡಿಯುವ ನೀರು ಜನರಿಗೆ ಬಟ್ಟೆ ತೊಳೆಯಲು ಅನುಕೂಲವಾಗುವಂತೆ ಈ ಗ್ರಾಮಗಳಲ್ಲಿ ಸರ್ಚ ಸಂಸ್ಥೆ ಯಶಸ್ವಿಯಾಗಿ ಕೆಲಸಗಳನ್ನು ಜನರಿಂದಲೇ ಮಾಡುಸುವಂತೆ ಕ್ರಮ ತೆಗೆದುಕೊಂಡಿರುತ್ತೆವೆ. ಇನ್ನು ಮುಂದಿನ ದಿನಗಳಲ್ಲಿಯು ಸರ್ಚ ಸಂಸ್ಥೆ ಅಂತರ ಜಲಮಟ್ಟ ಹೆಚ್ಚಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶವಿರುತ್ತದೆ. ಈ ಕೆಲಸದಲ್ಲಿ ತೊಡಗಿರುವಂತ ಜನರಿಗೆ ಉಚಿತವಾಗಿ 1000ರೂ.ಗಳಿಂದ 1500ರೂ.ಗಳವರಿಗಿನ ರೇಷನ್ ಕಿಟ್ಟಗಳನ್ನು ವಿತರಣೆ ಮಾಡಲಾಗಿರುತ್ತದೆ.



ಸರ್ಚ ಕಳೆದ 25 ವರ್ಷಗಳಲ್ಲಿ ಅದೆಷ್ಟೋ ಸ್ವಯಂ ಸೇವಾ ಸಂಘಟನೆಗಳು, ಸಂಘಟನೆಗಳ ಒಕ್ಕೂಟಗಳು, ರಾಷ್ಟ್ರೀಯ ಮಟ್ಟದಲ್ಲಿ ಜನರ ಹಕ್ಕುಗಳ ಮತ್ತು ಜನರ ಘನತೆಯ ಬಾಳುವಿಕೆಗೆ ಶ್ರಮೀಸುತ್ತಿರುವ ಸಂಘಟನೆಗಳ ಸಂಪರ್ಕದಲ್ಲಿ ಬಂದಿದೆ. ಈ ಸಂಪರ್ಕಗಳು ನಮ್ಮ ಸಂಸ್ಥೆಯ ಅನೇಕ ಆಯಾಮಗಳಲ್ಲಿ ತಿಳಿವಳಿಕೆಗಳನ್ನು ಹೆಚ್ಚಿಸಿ ನಮ್ಮ ಕಾರ್ಯಕೌಶಲ್ಯವನ್ನು ಮತ್ತಷ್ಟು ಪರಿನಾಮಕಾರಿಯಗುವಂತೆ ಮಾಡಿವೆ ಅಲ್ಲದೆ ಸರ್ಚ ಸಂಸ್ಥೆ ಜನ ಸಾಮಾನ್ಯರ ಸೇವೆಯಲ್ಲಿ ಮತ್ತಷ್ಟು ವಿನೀತರಾಗಿ, ಪರಿಣಾಮಕಾರಿಯಾಗಿ ಪಾಲ್ಗೊಳ್ಳಲು ಪ್ರೇರೇಪಿಸಿವೆ. ಈ ಎಲ್ಲಾ ಸಂಸ್ಥೆಗಳಿಗು ನಮ್ಮ ಧನ್ಯವಾದಗಳನ್ನು ಹೇಳುತ್ತಾ ಮುಂಬರುವ ದಿನಗಳಲ್ಲಿ ತಮ್ಮ ಸಂಪರ್ಕದ ಕೊಂಡಿ ಮತ್ತಷ್ಟೂ ಮಾರ್ಗದರ್ಶನ, ನೈಪೂಣ್ಯತೆ ನಿರಂತರವಾಗಿ ದೊರಕಲಿ ಎಂದು ಆಶಿಸುತ್ತೇವೆ.

ಕೊನೆಯದಾಗಿ ಸರ್ಚ ಸಂಸ್ಥೆ ತನ್ನ ಪ್ರೇರಕರನ್ನು ಆಡಳಿತ ಮಂಡಳಿಯ ಸದಸ್ಯರನ್ನು ಹಿಂದಿನ ವರ್ಷಗಳ ಮಾರ್ಗದರ್ಶಕರನ್ನು ನೆನೆಯುತ್ತ ಧನ್ಯವಾದಗಳನ್ನು ಅರ್ಪಿಸುತ್ತದೆ.



Scanned by PDF Scanner

ನಮ್ಮ ದಾನಿಗಳು ಎಸ್ಸಿಲೋರ ಇಂಡಿಯಾ, ಬಾಯರ್ ಇಂಡಿಯಾ, ಬಾಯರ್ ಎಗ್ರೋ, ಅಕ್ಸೆಂಚರ್, ಇಂಡೊ ಜರ್ಮನಿ ಸೋಶಲ್ ಸರ್ವಿಸ್ ಸೊಸೈಟಿ, ನಬಾಡ ಹಣಕಾಸಿನ ಸೇವಾ ಸಂಸ್ಥೆ, ಗಿವ್ಟೇಬಲ್, ಎಡ್ಯೂರೇಸ್, ಎನೊಬಲ್, ಸಿಸ್ವಮಾ ಬಯು ಕಂಪನಿಗಳು ಇಂತಹರ ಸಹಾಯವಿಲ್ಲದಿದ್ದರೆ ನಮ್ಮ ಈ ಹೋರಟದಲ್ಲಿ ಏಕಾಂಗಿಯಾಗುತ್ತಿದ್ದೆವು ನಮ್ಮ ಹೊರಾಟ ಹಿಂದುಳಿದ ತುಳಿಯಲ್ಪಟ್ಟ ಜನ ಸಮುದಾಯವನ್ನು ಮೇಲಕ್ಕೆ ಎತ್ತುವುದೆಯಾಗಿದೆ ಈ ಎಲ್ಲ ಸಂಸ್ಥೆಗಳಿಗು ತುಂಬು ಹೃದಯದ ಧನ್ಯವಾದಗಳು.

ನಾವು ಸರ್ಚ ಸಂಸ್ಥೆಯಲ್ಲಿ ಪೂರ್ಣ ಅರಿವಿನಿಂದ ನೋಡಿದಾಗ ಶ್ರೇಷ್ಟವಾದದ್ದು ಇನ್ನೂ ಬರಲಿಕ್ಕಿದೆ. ಇದುವರೆಗಿನ ಸಾಧನೆ ಆರಂಭ ಮಾತ್ರ ಎಂಬ ಗಾಢ ನಂಬಿಕೆಯೊಂದಿಗೆ ತಮ್ಮೆಲ್ಲರ ಸಾಹಾಯ, ಸಮರ್ಥನೆ, ಸಹಕಾರ, ಬೆಂಬಲದಿಂದ ಮಾತ್ರ ನಮ್ಮ ಜನ ಸಮುದಾಯಗಳನ್ನು ಕಾಡುತ್ತಿರುವ ಸಮಸ್ಯೆಗಳ ನಿವಾರಣೆಗೆ ಸೇವೆ ಸಲ್ಲಿಸಲು ಸಾಧ್ಯವೆಂದು, ಸರ್ಚ ಸಂಸ್ಥೆ ತಾನು ನಂಬಿದ ಸೇವಾ ಗುರಿಯಡೆಗೆ, ಮತ್ತಮ್ಮೆ ಪಣತೊಟ್ಟು ನವೀಕೃತ ಶಕ್ತಿಗಳೊಂದಿಗೆ ಮುಂಬರುವ ವರ್ಷಗಳ ಸವಾಲುಗಳನ್ನು ಎದುರಿಸಲು ಅಣಿಯಾಗಿದೆ.

## ಹಿನ್ನೆಲೆ:-

ಸರ್ಚ ಸ್ವಯಂ ಸೇವಾ ಸಂಸ್ಥೆ(ರಿ) ಬಾಗಲಕೋಟೆ ಜಿಲ್ಲೆ ಸಂಸ್ಥೆಯು ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರನ್ನು ಆರ್ಥಿಕ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿ ಪಡಿಸುವುದು. ಈ ಉದ್ದೇಶದಿಂದ ಸ್ವ-ಸಹಾಯ ಗುಂಪುಗಳನ್ನು ರಚನೆಮಾಡಿ ಸದರಿ ಗುಂಪುಗಳ ಮುಖಾಂತರ ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿ ಮತ್ತು ಆದಾಯೋತ್ಪನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರತಿಯೊಂದು ಗುಂಪಿನ ಸದಸ್ಯರುಗಳಿಗೆ ಆದಾಯ ತರುವ ಕಾರ್ಯ ಚಟುವಟಿಕೆಯಲ್ಲಿ ತೊಡಗಿಸುವಂತೆ ಪ್ರೇರಣೆ ನೀಡಲಾಗಿರುತ್ತದೆ. ಈ ಹಂತದಲ್ಲಿ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮುಖಾಂತರ ಸಾಲ ಸೌಲಭ್ಯ ಪ್ರಾರಂಭಿಸಿದ ನಂತರ ಸಾಲ ಪಡೆದ ಸಂಘದ ಪ್ರತಿಯೊಬ್ಬ ಸದಸ್ಯರು ಆರ್ಥಿಕ ಮಟ್ಟದಲ್ಲಿ ಸುಧಾರಣೆಯಾದ ಬಗ್ಗೆ ಸ್ವ-ಸಹಾಯ ಸಂಘಗಳ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಗಿನಂತಿರುತ್ತದೆ.

### 1ನೇ ಕೇಸ್ ಸ್ಟಡಿ

| | | |
|---|---|---|
| 1) ಸಂಸ್ಥೆಯ ಹೆಸರು | : | ಸರ್ಚ ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆ (ರಿ) ಬಾಗಲಕೋಟೆ. |
| 2) ಸಂಘದ ಹೆಸರು | : | ಶ್ರೀ ಎಲ್ಲಮ್ಮದೇವಿ ಮಹಿಳಾ ಸ್ವ-ಸಹಾಯ ಸಂಘ ಕಮತಗಿ. |
| 3) ಸಂಘದ ಸ್ಥಾಪನಾ ದಿನಾಂಕ | : | 02/06/2006 |
| 4) ಸದಸ್ಯರ ಸಂಖ್ಯೆ | : | 10 |
| 5) ಸದಸ್ಯರ ಹೆಸರು | : | ಹುಚ್ಚವ್ವ ಹನಮಪ್ಪ ಹಗೆದಾಳ |
| 6) ಚಟುವಟಿಕೆ | : | ರೊಟ್ಟಿ ವ್ಯಾಪಾರ |
| 7) ನಬಾರ್ಡನಿಂದ ಪಡೆದ ಸಾಲ | : | 25,000/- |
| 8) ಸಾಲ ಪಡೆದ ದಿನಾಂಕ | : | 18/11/2010 |
| 9) ಖರೀದಿ ಬೇಲೆ | : | 25,000/- |
| 10) 1 ತಿಂಗಳಿಗೆ ಆದಾಯ | : | 9,000/- |

**ಸಾಲ ತಗೆದುಕೊಳ್ಳುವ ಮೊದಲಿನ ಸ್ಥಿತಿ:**

ಸಂಘದ ಸದಸ್ಯರು ಬಿ.ಪಿ.ಎಲ್ ಕುಟುಂಬದವರಾಗಿದ್ದು ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು. ಅವರಿಗೆ ಪ್ರತಿ ದಿನ ಕೂಲಿ ಕೆಲಸ ದೊರಕುತ್ತಿದ್ದಿಲ್ಲ, ವಾರದಲ್ಲಿ 2 ರಿಂದ 3 ದಿನಗಳವರೆಗೆ ಮಾತ್ರ ಕೆಲಸ ಸಿಗುತ್ತಿತ್ತು. ನಮ್ಮ ಮನೆಯಲ್ಲಿ ಗಂಡ ಮಕ್ಕಳು ನಾವೆಲ್ಲರೂ ದುಡಿಯಲ್ಲಿದ್ದರೆ ಗತಿ ಇರುವದಿಲ್ಲ, ಪ್ರತಿ ದಿನ ದುಡಿದು ಬದುಕಲು ಹರಸಾಹಸವೇ ಪಡಬೇಕಾಗುತ್ತಿತ್ತು.

**ಉದ್ಯಮ ಶೀಲತಾ ತರಬೇತಿ ನಂತರ:**

ಸರ್ಚ ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆ(ರಿ) ಬಾಗಲಕೋಟೆ. ನಮ್ಮ ಕಮತಗಿ ಗ್ರಾಮದಲ್ಲಿ 2011 ರಂದು ಉದ್ಯಮ ಶೀಲತಾ ತರಬೇತಿಯನ್ನು ಪ್ರಾರಂಭಿಸಿ ಸದರಿ ತರಬೇತಿಯಲ್ಲಿ ಶ್ರೀಮತಿ. ಹುಚ್ಚವ್ವ .ಹನಮಪ್ಪ. ಹಗೆದಾಳ. ನಾನು ತರಬೇತಿ ಪಡೆದುಕೊಂಡು ನನ್ನ ಮನೆಯಲ್ಲಿ ರೊಟ್ಟಿ ತಯಾರಿಸುವ ಕೆಲಸ ಪ್ರಾರಂಭಿಸಿರುತ್ತೇನೆ. ನಾನು ಬಡತನ ಪರಿಸ್ಥಿಯಲ್ಲಿರುವುದರಿಂದ ಯಾವದಾದರು ಒಂದು ಉದ್ಯೋಗ ಪ್ರಾರಂಭಿಸಲು ಆಸಕ್ತಿಯಿತ್ತು. ಆದರೆ ಸ್ವಂತ ಬಂಡವಾಲದ ಕೊರೆತೆಯಿತ್ತು, ಈಗ ನಾನು ಸ್ವಂತ ಬಂಡವಾಲ ಹಾಕಿ ರೊಟ್ಟಿ ತಯಾರಿಸಿ ಮಾರಾಟ ಮಾಡುತ್ತೆನೆ. ಇದರಲ್ಲಿ ನನಗೆ ಲಾಭ ದೊರೆಯುತ್ತದೆ. ಈಗ ನನ್ನ ಕುಟುಂಬಕ್ಕೆ ಉತ್ತಮ ರೀತಿಯಲ್ಲಿ ಬದಕಲು ಸಹಾಯವಾಗುತ್ತದೆ. ಸರ್ಚ ಸಂಸ್ಥೆಯವರು ಬರೆ ತರಬೆತಿ ಕೊಡಿಸಿ ಕೈ ಬಿಡಲಿಲ್ಲ ನಬಾರ್ಡ ಹಣಕಾಸು ಸೇವಾ ಸಂಸ್ಥೆಯಿಂದ ಸ್ವಯಂ ಉದ್ಯೋಗ ಪ್ರಾರಂಭಿಸಲು 25,000ರೂಗಳು ಸಾಲ ಸೌಲಭ್ಯವನ್ನು ದೊರಕಿಸಿಕೊಟ್ಟರು. ಈ ಹಣ ಬಂಡವಾಳ ಹಾಕಿ ಕಳೆದು 7 ತಿಂಗಳಿಗೆ 63000ಕ್ಕೂ ಲಾಭಪಡೆಯುತ್ತಿದ್ದೆನೆ. ಈ ಚಟುವಟಿಕೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಲು ಆಸಕ್ತಿ ಹೊಂದಿದ್ದೆನೆ. ನನ್ನ ಈ ಯಶಸ್ವಿಗೆ ಕಾರಣಭೂತರಾಗಿರುವಂತಹ ಸರ್ಚ ಸಂಸ್ಥೆ(ರಿ). ಭಾರತಿಯ ಉದ್ಯಮ ಶಿಲತಾ ಅಭಿವೃದ್ಧಿ ಬೆಂಗಳೂರು, ಎಕ್ಷಂಚರ್ ಸಂಸ್ಥೆ ಬೆಂಗಳೂರು. ಹಾಗೂ ನಬಾರ್ಡ ಬ್ಯಾಂಕ ಇವರಿಗೆ ಹೃತ್ಪೂರ್ವಕಾವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.



Scanned by PDF Scanner

ಹಿನ್ನೆಲೆ:-

ಸರ್ಚ್ ಸ್ವಯಂ ಸೇವಾ ಸಂಸ್ಥೆ,(ರಿ)ಕಮತಗಿ ಬಾಗಲಕೋಟ ಜಿಲ್ಲೆ ಸಂಸ್ಥೆಯು ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುವದು. ಈ ಉದ್ದೇಶದಿಂದ, ಉದ್ಯೋಗದ ಅವಕಾಶ ವಂಚಿತರಾಗಿರುವಂತಹ ಬಡ ಯುವಕ ಮತ್ತು ಯುವತಿಯರಿಗೆ ಮತ್ತು ಮಹಿಳೆಯರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತೆ, ಪ್ರೇರೇಪಿಸಲು ಭಾರತೀಯ ಉದ್ಯಮ ಶೀಲತಾ ಅಭಿವೃದ್ಧಿ ಸಂಸ್ಥೆ ಮತ್ತು ಎಕ್ಸೆಂಚರ್ ಸಂಸ್ಥೆ ಬೆಂಗಳೂರು. ಇವರ ಆರ್ಥಿಕ ಸಹಾಯದಿಂದ 1 ತಿಂಗಳ ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡು, ಸದರಿ ತರಬೇತಿಯಲ್ಲಿ ಉದ್ಯಮ ಶೀಲತಾ ವಿಷಯಗಳು ಮತ್ತು ಮಾರುಕಟ್ಟೆ ಸಮೀಕ್ಷೆ ಹಾಗೂ ಯೋಜನಾ ವರದಿ ತಯಾರಿಸಿಕೊಂಡು ಯಾವ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಂಡು ಉದ್ಯೋಗವನ್ನು ಪ್ರಾರಂಭಿಸಿ ಅದರಿಂದ, ಯಶಸ್ವಿಯಾಗಿ ನಿರ್ವಹಿಸುವದು ಹೇಗೆ ಎಂಬುದನ್ನು ಕಲಿತುಕೊಂಡು ಸಂಪೂರ್ಣವಾಗಿ ಸ್ವಯಂ ಉದ್ಯೋಗಿಯಾಗಿ ಮುಂದುವರೆಯುತ್ತಿರುವ ವ್ಯಕ್ತಿಗಳಿಗೆ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮತ್ತು ಸರ್ಚ ಸಂಸ್ಥೆಯು ಅಕ್ಟೋಬರ್ 2011ರಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಯಿತು. ನಂತರ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮುಖಾಂತರ ಸಾಲ ಸೌಲಭ್ಯ ಪ್ರಾರಂಭಿಸಿದ ನಂತರ, ಸಾಲ ಪಡೆದ ವ್ಯಕ್ತಿಗಳು ತಮ್ಮ ಉದ್ಯೋಗವನ್ನು ಯಶಸ್ವಿಯಾಗಿ ನಡೆಸಿ ಪ್ರತಿಯೊಬ್ಬ ಸದಸ್ಯರು ಆರ್ಥಿಕ ಮಟ್ಟದಲ್ಲಿ ಸುಧಾರಣೆಯಾದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಗಿನಂತಿರುತ್ತದೆ.

### 3ನೇ ಕೇಸ್ ಸ್ಟಡಿ

| | | |
|---|---|---|
| 1) ಸಂಸ್ಥೆಯ ಹೆಸರು | : | ಸರ್ಚ್ ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆ,(ರಿ) ಕಮತಗಿ.ರ |
| 2) ವ್ಯಕ್ತಿಯ ಹೆಸರು ಮತ್ತು ವಿಳಾಸ | : | ಈರವ್ವ. ಚ. ಕುಮಚಗಿ.<br>ವಾರ್ಡ ನಂ.6 ಗುಳೇದಗುಡ್ಡ.<br>ತಾ॥ ಬದಾಮಿ ಜಿ॥ ಬಾಗಲಕೋಟ. ಕರ್ನಾಟಕ ರಾಜ್ಯ. |
| 3) ಚಟುವಟಿಕೆ ಪ್ರಾರಂಭಿಸಿದ ದಿನಾಂಕ | : | 15/02/2011 |
| 4) ಚಟುವಟಿಕೆ | : | ಸೀರೆ ನೇಕಾರಿಕೆ. |
| 4) ನಬಾರ್ಡನಿಂದ ಪಡೆದ ಸಾಲ | : | 20,000/- |
| 5) ಸಾಲ ಪಡೆದ ದಿನಾಂಕ | : | 10/02/2011 |
| 6) ಕಚ್ಚಾ ವಸ್ತುಗಳ ಖರೀದಿ ಬೆಲೆ | : | 20,000/- |
| 7) ಮಾರಾಟ ಬೆಲೆ | : | 30,000/- |
| 8) 7 ತಿಂಗಳಿಗೆ ಲಾಭ | : | 2,10,000/- |

**ಮೊದಲಿನ ಸ್ಥಿತಿ:**

ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು. ಪ್ರತಿ ದಿನ ಕೂಲಿ ಕೆಲಸ ದೊರಕುತ್ತಿರಲಿಲ್ಲ. ಸಾಲದ ಅವಶ್ಯಕತೆ ಆದಾಗ ಬಡ್ಡಿಯಂತೆ, ಬೇರೆ ಕಡೆ ಸಾಲ ಪಡೆದು ಜೀವನ ಸಾಗಿಸುತ್ತಿದ್ದರು. ಇದರಿಂದಾಗಿ ಕುಟುಂಬದಲ್ಲಿ ಆರ್ಥಿಕವಾಗಿ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದರು. ಹೊರಗಡೆ ಕೂಲಿ ಕೆಲಸ ಕೂಡ ಪ್ರತಿ ದಿನ ಇರುವದಿಲ್ಲ ವಾರದಲ್ಲಿ 2 ರಿಂದ 3 ದಿನಗಳವರೆಗೆ ಮಾತ್ರ ಕೆಲಸ ಸಿಗುತ್ತಿತ್ತು. ನಮ್ಮ ಮನೆಯಲ್ಲಿ ಗಂಡ ಮಕ್ಕಳು ನಾವೆಲ್ಲರೂ ದುಡಿಯಲಿದ್ದರೆ ಗತಿ ಇರುವದಿಲ್ಲ. ಹೊಟ್ಟೆಗೆ ಹಿಟ್ಟು ಇರುವದಿಲ್ಲ. ಪ್ರತಿ ದಿನ ದುಡಿದು ಬದುಕಲು ಹರಸಾಹಸವೇ ಪಡಬೇಕಾಗುತ್ತಿತ್ತು.

**ಉದ್ಯಮ ಶೀಲತಾ ತರಬೇತಿ ನಂತರ:**

ಸರ್ಚ ಸ್ವಯಂ ಸಂಸ್ಥೆ(ರಿ) ಕಮತಗಿ. ನಮ್ಮ ಗುಳೇದಗುಡ್ಡ ಗ್ರಾಮದಲ್ಲಿ ಜನವರಿ 2011ರಂದು ಉದ್ಯಮ ಶೀಲತಾ ಅಭಿವೃದ್ಧಿಯನ್ನು ಪ್ರಾರಂಭಿಸಿ ಸದರಿ ತರಬೇತಿಯಲ್ಲಿ ಶ್ರೀಮತಿ. ಈರವ್ವ. ಚ. ಕುಮಚಗಿ. ನಾನು ತರಬೇತಿ ಪಡೆದುಕೊಂಡು ನನ್ನ ಮನೆಯಲ್ಲಿ ಸೀರೆ ನೇಕಾರಿಕೆ ಕೈ ಮಗ್ಗವನ್ನು ಹಾಕಿ ಕೆಲಸ ಪ್ರಾರಂಭಿಸಿರುತ್ತೇನೆ ಮೂಲತಃ ನಾನು ನೇಕಾರಿಕೆ ಕುಟುಂಬದವಳಾಗಿರುವದರಿಂದ, ಉದ್ಯೋಗದ ಬಗ್ಗೆ ಮಾಹಿತಿ ಮತ್ತು ಆಸಕ್ತಿಯಿತ್ತು ಆದರೆ, ಸ್ವಂತ ಮಗ್ಗ ಹಾಕಿ ಬಂಡವಾಳದ ಕೊರತೆಯಿತ್ತು. ಈಗ ನಾನು ಸ್ವಂತ ಬಂಡವಾಳ ಹಾಕಿ ಸ್ವತಃ ಸೀರೆಗಳನ್ನು ತಯಾರಿಸಿ ಬೇರೆ ಬೇರೆ ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದೇನೆ. ಈಗ ನನ್ನ ಕುಟುಂಬದಲ್ಲಿ ಉತ್ತಮ ರೀತಿಯಲ್ಲಿ ಬದುಕಲು ಸಹಾಯವಾಗಿರುತ್ತದೆ. ಕುಟುಂಬದ ಸದಸ್ಯರು ಕೂಡ ಈ ಚಟುವಟಿಕೆಯಲ್ಲಿ ಭಾಗವಹಿಸಿ ಪ್ರತಿ ದಿನವು ಇದೇ ಕೆಲಸವನ್ನು ಮಾಡುತ್ತಿದ್ದೇವೆ. ಬೇರೆ ಕೂಲಿ ಕೆಲಸವಾಗಲಿ ಬೇರೆ ಇನ್ನಾವ ಕೆಲಸವಾಗಲಿ ಮಾಡಲು ಹೋಗುವದಿಲ್ಲ. ಈಗ ನಾನು ಯಶಸ್ವಿಯಾಗಿ ಉದ್ಯಮ ಶೀಲಳಾಗಿ ಕೆಲಸ ಮಾಡುತ್ತಿದ್ದೇನೆ. ಸರ್ಚ ಸಂಸ್ಥೆಯವರು ಬರೆ ತರಬೇತಿಯನ್ನು ಕೊಡಿಸಿ ಕೈ ಬಿಡಲಿಲ್ಲ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮುಖಾಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು 20,000 ರೂ.ಗಳು ಸಾಲ ಸೌಲಭ್ಯವನ್ನು ದೊರಕಿಸಿಕೊಟ್ಟರು. ಈ ಹಣವನ್ನು ಬಂಡವಾಳ ಹಾಕಿ ಕಳೆದ 7 ತಿಂಗಳಲ್ಲಿ 2,00,000ಕ್ಕೂ ಮೇಲ್ಪಟ್ಟು ಲೇವಾದೇವಿಯನ್ನು ಮಾಡುತ್ತಿದ್ದೇನೆ. ಈಗ ನಾನು ತುಂಬಾ ಸಂತೋಷವಾಗಿ ಆತ್ಮ ಸ್ಥೈರ್ಯದಿಂದ ನನ್ನ ಈ ಚಟುವಟಿಕೆಯನ್ನು ನಿರಂತರ ಮುಂದುವರೆಸಿಕೊಂಡು ಹೋಗಲು ಆಸಕ್ತಿ ಹೊಂದಿದ್ದೇನೆ. ನನ್ನ ಈ ಯಶಸ್ವಿಗೆ ಕಾರಣಭೂತರಾಗಿರುವಂತಹ ಸರ್ಚ ಸಂಸ್ಥೆ(ರಿ) ಕಮತಗಿ. ಭಾರತೀಯ ಉದ್ಯಮ ಶೀಲತಾ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಎಕ್ಸೆಂಚರ್ ಸಂಸ್ಥೆ ಬೆಂಗಳೂರ. ಹಾಗೂ ನಬಾರ್ಡ ಬ್ಯಾಂಕ್ ಇವರಿಗೆ, ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.



Scanned by PDF Scanner

**ಹಿನ್ನೆಲೆ:-**

ಸರ್ಚ್ ಸ್ವಯಂ ಸೇವಾ ಸಂಸ್ಥೆ,(ರಿ)ಕಮತಗಿ ಬಾಗಲಕೋಟ ಜಿಲ್ಲೆ ಸಂಸ್ಥೆಯು ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುವದು. ಈ ಉದ್ದೇಶದಿಂದ, ಉದ್ಯೋಗದ ಅವಕಾಶ ವಂಚಿತರಾಗಿರುವಂತಹ ಬಡ ಯುವಕ ಮತ್ತು ಯುವತಿಯರಿಗೆ ಮತ್ತು ಮಹಿಳೆಯರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತೆ, ಪ್ರೇರೇಪಿಸಲು ಭಾರತೀಯ ಉದ್ಯಮ ಶೀಲತಾ ಅಭಿವೃದ್ಧಿ ಸಂಸ್ಥೆ ಮತ್ತು ಎಕ್ಸಂಚರ್ ಸಂಸ್ಥೆ ಬೆಂಗಳೂರು. ಇವರ ಆರ್ಥಿಕ ಸಹಾಯದಿಂದ 1 ತಿಂಗಳ ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡು, ಸದರಿ ತರಬೇತಿಯಲ್ಲಿ ಉದ್ಯಮ ಶೀಲತಾ ವಿಷಯಗಳು ಮತ್ತು ಮಾರುಕಟ್ಟೆ ಸಮೀಕ್ಷೆ ಹಾಗೂ ಯೋಜನಾ ವರದಿ ತಯಾರಿಸಿಕೊಂಡು ಯಾವ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಂಡು ಉದ್ಯೋಗವನ್ನು ಪ್ರಾರಂಭಿಸಿ ಅದರಿಂದ, ಯಶಸ್ವಿಯಾಗಿ ನಿರ್ವಹಿಸುವದು ಹೇಗೆ ಎಂಬುದನ್ನು ಕಲಿತುಕೊಂಡು ಸಂಪೂರ್ಣವಾಗಿ ಸ್ವಯಂ ಉದ್ಯೋಗಿಯಾಗಿ ಮುಂದುವರೆಯುತ್ತಿರುವ ವ್ಯಕ್ತಿಗಳಿಗೆ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮತ್ತು ಸರ್ಚ ಸಂಸ್ಥೆಯು ಅಕ್ಟೋಬರ್ 2011ರಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಯಿತು. ನಂತರ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮುಖಾಂತರ ಸಾಲ ಸೌಲಭ್ಯ ಪ್ರಾರಂಭಿಸಿದ ನಂತರ, ಸಾಲ ಪಡೆದ ವ್ಯಕ್ತಿಗಳು ತಮ್ಮ ಉದ್ಯೋಗವನ್ನು ಯಶಸ್ವಿಯಾಗಿ ನಡೆಸಿ ಪ್ರತಿಯೊಬ್ಬ ಸದಸ್ಯರು ಆರ್ಥಿಕ ಮಟ್ಟದಲ್ಲಿ ಸುಧಾರಣೆಯಾದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಗಿನಂತಿರುತ್ತದೆ.

## 2ನೇ ಕೇಸ್ ಸ್ಟಡಿ

| | | |
|---|---|---|
| 1) ಸಂಸ್ಥೆಯ ಹೆಸರು | : | ಸರ್ಚ್ ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆ,(ರಿ) ಕಮತಗಿ.ರ |
| 2) ವ್ಯಕ್ತಿಯ ಹೆಸರು ಮತ್ತು ವಿಳಾಸ | : | ರಾಜಬಿ. ಬುಡ್ಡೇಸಾಬ. ಕೌಂಟಿಗೌಡ್ರ.<br>ವಾರ್ಡ ನಂ.6 ಗುಳೇದಗುಡ್ಡ.<br>ತಾ॥ ಬದಾಮಿ ಜಿ॥ ಬಾಗಲಕೋಟ. ಕರ್ನಾಟಕ ರಾಜ್ಯ. |
| 3) ಚಟುವಟಿಕೆ ಪ್ರಾರಂಭಿಸಿದ ದಿನಾಂಕ | : | 15/02/2011 |
| 4) ಚಟುವಟಿಕೆ | : | ತರಕಾರಿ ಮತ್ತು ಹಣ್ಣು ವ್ಯಾಪಾರ. |
| 4) ನಬಾರ್ಡನಿಂದ ಪಡೆದ ಸಾಲ | : | 20,000/- |
| 5) ಸಾಲ ಪಡೆದ ದಿನಾಂಕ | : | 10/02/2011 |
| 6) ಕಚ್ಚಾ ವಸ್ತುಗಳ ಖರೀದಿ ಬೆಲೆ | : | 20,000/- |
| 7) ಮಾರಾಟ ಬೆಲೆ | : | 30,000/- |
| 8) 7 ತಿಂಗಳಿಗೆ ಲಾಭ | : | 2,10,000/- |

**ಮೊದಲಿನ ಸ್ಥಿತಿ:**

ಕೃಷಿ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು. ಪ್ರತಿ ದಿನ ಕೂಲಿ ಕೆಲಸ ದೊರಕುತ್ತಿರಲಿಲ್ಲ. ಸಾಲದ ಅವಶ್ಯಕತೆ ಆದಾಗ ಬಡ್ಡಿಯಂತೆ, ಬೇರೆ ಕಡೆ ಸಾಲ ಪಡೆದು ಜೀವನ ಸಾಗಿಸುತ್ತಿದ್ದರು. ಇದರಿಂದಾಗಿ ಕುಟುಂಬದಲ್ಲಿ ಆರ್ಥಿಕವಾಗಿ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದರು. ಹೊರಗಡೆ ಕೂಲಿ ಕೆಲಸ ಕೂಡ ಪ್ರತಿ ದಿನ ಇರುವದಿಲ್ಲ ವಾರದಲ್ಲಿ 2 ರಿಂದ 3 ದಿನಗಳವರೆಗೆ ಮಾತ್ರ ಕೆಲಸ ಸಿಗುತ್ತಿತ್ತು. ನಮ್ಮ ಮನೆಯಲ್ಲಿ ಗಂಡ ಮಕ್ಕಳು ನಾವೆಲ್ಲರೂ ದುಡಿಯಲಿದ್ದರೆ ಗತಿ ಇರುವದಿಲ್ಲ. ಹೊಟ್ಟೆಗೆ ಹಿಟ್ಟು ಇರುವದಿಲ್ಲ. ಪ್ರತಿ ದಿನ ದುಡಿದು ಬದುಕಲು ಹರಸಾಹಸವೇ ಪಡಬೇಕಾಗುತ್ತಿತ್ತು.

**ಉದ್ಯಮ ಶೀಲತಾ ತರಬೇತಿ ನಂತರ:**

ಸರ್ಚ ಸ್ವಯಂ ಸಂಸ್ಥೆ(ರಿ) ಕಮತಗಿ. ನಮ್ಮ ಗುಳೇದಗುಡ್ಡ ಗ್ರಾಮದಲ್ಲಿ ಜನವರಿ 2011ರಂದು ಉದ್ಯಮ ಶೀಲತಾ ಅಭಿವೃದ್ಧಿಯನ್ನು ಪ್ರಾರಂಭಿಸಿ ಸದರಿ ತರಬೇತಿಯಲ್ಲಿ ಶ್ರೀಮತಿ. ರಾಜಬಿ. ಬುಡ್ಡೇಸಾಬ. ಕೌಂಟಿಗೌಡ್ರ. ನಾನು ತರಬೇತಿ ಪಡೆದುಕೊಂಡು ನನ್ನ ಮನೆಯಲ್ಲಿ ತರಕಾರಿ ಮತ್ತು ಹಣ್ಣು ವ್ಯಾಪಾರ ಪ್ರಾರಂಭಿಸಿ ಬೇರೆ ಬೇರೆ ಮಾರುಕಟ್ಟೆಗಳಿಗೆ ಹೋಗಿ ಮಾರಾಟ ಮಾಡುತ್ತಿದ್ದೇನೆ. ಈಗ ನನ್ನ ಕುಟುಂಬದಲ್ಲಿ ಉತ್ತಮ ರೀತಿಯಲ್ಲಿ ಬದುಕಲು ಸಹಾಯವಾಗಿರುತ್ತದೆ. ಕುಟುಂಬದ ಸದಸ್ಯರು ಕೂಡ ಈ ಚಟುವಟಿಕೆಯಲ್ಲಿ ಭಾಗವಹಿಸಿ ಪ್ರತಿ ದಿನವು ಇದೇ ಕೆಲಸವನ್ನು ಮಾಡುತ್ತಿದ್ದೇವೆ. ಬೇರೆ ಕೂಲಿ ಕೆಲಸವಾಗಲಿ ಬೇರೆ ಇನ್ಯಾವ ಕೆಲಸವಾಗಲಿ ಮಾಡಲು ಹೋಗುವದಿಲ್ಲ. ಈಗ ನಾನು ಯಶಸ್ವಿಯಾಗಿ ಉದ್ಯಮ ಶೀಲಳಾಗಿ ಕೆಲಸ ಮಾಡುತ್ತಿದ್ದೇನೆ. ಸರ್ಚ ಸಂಸ್ಥೆಯವರು ಬರೆ ತರಬೇತಿಯನ್ನು ಕೊಡಿಸಿ ಕೈ ಬಿಡಲಿಲ್ಲ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮುಖಾಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು 20,000 ರೂ.ಗಳು ಸಾಲ ಸೌಲಭ್ಯವನ್ನು ದೊರಕಿಸಿಕೊಟ್ಟರು. ಈ ಹಣವನ್ನು ಬಂಡವಾಳ ಹಾಕಿ ಕಳೆದ 7 ತಿಂಗಳಲ್ಲಿ 2,00,000ಕ್ಕೂ ಮೇಲ್ಪಟ್ಟು ಲೇವಾದೇವಿಯನ್ನು ಮಾಡುತ್ತಿದ್ದೇನೆ. ಈಗ ನಾನು ತುಂಬಾ ಸಂತೋಷವಾಗಿ ಆತ್ಮ ಸ್ಥೈರ್ಯದಿಂದ ನನ್ನ ಈ ಚಟುವಟಿಕೆಯನ್ನು ನಿರಂತರ ಮುಂದುವರೆಸಿಕೊಂಡು ಹೋಗಲು ಆಸಕ್ತಿ ಹೊಂದಿದ್ದೇನೆ. ನನ್ನ ಈ ಯಶಸ್ವಿಗೆ ಕಾರಣಭೂತರಾಗಿರುವಂತಹ ಸರ್ಚ ಸಂಸ್ಥೆ(ರಿ) ಕಮತಗಿ. ಭಾರತೀಯ ಉದ್ಯಮ ಶೀಲತಾ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಎಕ್ಷಂಚರ್ ಸಂಸ್ಥೆ ಬೆಂಗಳೂರ. ಹಾಗೂ ನಬಾರ್ಡ ಬ್ಯಾಂಕ್ ಇವರಿಗೆ, ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.



Scanned by PDF Scanner

**ಹಿನ್ನೆಲೆ:-**

ಸರ್ಚ್ ಸ್ವಯಂ ಸೇವಾ ಸಂಸ್ಥೆ,(ರಿ)ಕಮತಗಿ ಬಾಗಲಕೋಟ ಜಿಲ್ಲೆ ಸಂಸ್ಥೆಯು ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುವದು. ಈ ಉದ್ದೇಶದಿಂದ, ಉದ್ಯೋಗದ ಅವಕಾಶ ವಂಚಿತರಾಗಿರುವಂತಹ ಬಡ ಯುವಕ ಮತ್ತು ಯುವತಿಯರಿಗೆ ಮತ್ತು ಮಹಿಳೆಯರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತೆ, ಪ್ರೇರೇಪಿಸಲು ಭಾರತೀಯ ಉದ್ಯಮ ಶೀಲತಾ ಅಭಿವೃದ್ಧಿ ಸಂಸ್ಥೆ ಮತ್ತು ಎಕ್ಸಂಚರ್ ಸಂಸ್ಥೆ ಬೆಂಗಳೂರು. ಇವರ ಆರ್ಥಿಕ ಸಹಾಯದಿಂದ 1 ತಿಂಗಳ ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡು, ಸದರಿ ತರಬೇತಿಯಲ್ಲಿ ಉದ್ಯಮ ಶೀಲತಾ ವಿಷಯಗಳು ಮತ್ತು ಮಾರುಕಟ್ಟೆ ಸಮೀಕ್ಷೆ ಹಾಗೂ ಯೋಜನಾ ವರದಿ ತಯಾರಿಸಿಕೊಂಡು ಯಾವ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಂಡು ಉದ್ಯೋಗವನ್ನು ಪ್ರಾರಂಭಿಸಿ ಆದರಿಂದ, ಯಶಸ್ವಿಯಾಗಿ ನಿರ್ವಹಿಸುವದು ಹೇಗೆ ಎಂಬುದನ್ನು ಕಲಿತುಕೊಂಡು ಸಂಪೂರ್ಣವಾಗಿ ಸ್ವಯಂ ಉದ್ಯೋಗಿಯಾಗಿ ಮುಂದುವರೆಯುತ್ತಿರುವ ವ್ಯಕ್ತಿಗಳಿಗೆ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮತ್ತು ಸರ್ಚ ಸಂಸ್ಥೆಯು ಅಕ್ಟೋಬರ್ 2011ರಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಯಿತು. ನಂತರ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮುಖಾಂತರ ಸಾಲ ಸೌಲಭ್ಯ ಪ್ರಾರಂಭಿಸಿದ ನಂತರ, ಸಾಲ ಪಡೆದ ವ್ಯಕ್ತಿಗಳು ತಮ್ಮ ಉದ್ಯೋಗವನ್ನು ಯಶಸ್ವಿಯಾಗಿ ನಡೆಸಿ ಪ್ರತಿಯೊಬ್ಬ ಸದಸ್ಯರು ಆರ್ಥಿಕ ಮಟ್ಟದಲ್ಲಿ ಸುಧಾರಣೆಯಾದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಗಿನಂತಿರುತ್ತದೆ.

## 1ನೇ ಕೇಸ್ ಸ್ಟಡಿ

| | | |
|---|---|---|
| 1) ಸಂಸ್ಥೆಯ ಹೆಸರು | : | ಸರ್ಚ್ ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆ,(ರಿ) ಕಮತಗಿ. |
| 2) ವ್ಯಕ್ತಿಯ ಹೆಸರು ಮತ್ತು ವಿಳಾಸ | : | ಶ್ರೀಮತಿ. ಹಸೀನಾ. ದಾವಲಸಾಬ. ಅತ್ತಾರ.<br>ವಾರ್ಡ ನಂ.4 ಅಮೀನಗಡ.<br>ತಾ॥ ಹುನಗುಂದ ಜಿ॥ ಬಾಗಲಕೋಟ. ಕರ್ನಾಟಕ ರಾಜ್ಯ. |
| 3) ಚಟುವಟಿಕೆ ಪ್ರಾರಂಭಿಸಿದ ದಿನಾಂಕ | : | 20/04/2011 |
| 4) ಚಟುವಟಿಕೆ | : | ಸಿಹಿ ಪದಾರ್ಥಗಳ ತಯಾರಿಸಿ ಮಾರಾಟ ಮಾಡುವದು. |
| 4) ನಬಾರ್ಡನಿಂದ ಪಡೆದ ಸಾಲ | : | 20,000/- |
| 5) ಸಾಲ ಪಡೆದ ದಿನಾಂಕ | : | 01/05/2011 |
| 6) ಕಚ್ಚಾ ವಸ್ತುಗಳ ಖರೀದಿ ಬೆಲೆ | : | 15,000/- |
| 7) ಮಾರಾಟ ಬೆಲೆ | : | 25,000/- |
| 8) 5 ತಿಂಗಳಿಗೆ ಲಾಭ | : | 1,25,000/- |

**ಮೊದಲಿನ ಸ್ಥಿತಿ:**

ಕೃಷಿ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು. ಪ್ರತಿ ದಿನ ಕೂಲಿ ಕೆಲಸ ದೊರಕುತ್ತಿರಲಿಲ್ಲ. ಸಾಲದ ಅವಶ್ಯಕತೆ ಆದಾಗ ಬಡ್ಡಿಯಂತೆ, ಬೇರೆ ಕಡೆ ಸಾಲ ಪಡೆದು ಜೀವನ ಸಾಗಿಸುತ್ತಿದ್ದರು. ಇದರಿಂದಾಗಿ ಕುಟುಂಬದಲ್ಲಿ ಆರ್ಥಿಕವಾಗಿ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದರು. ಹೊರಗಡೆ ಕೂಲಿ ಕೆಲಸ ಕೂಡ ಪ್ರತಿ ದಿನ ಇರುವದಿಲ್ಲ ವಾರದಲ್ಲಿ 2 ರಿಂದ 3 ದಿನಗಳವರೆಗೆ ಮಾತ್ರ ಕೆಲಸ ಸಿಗುತ್ತಿತ್ತು. ನಮ್ಮ ಮನೆಯಲ್ಲಿ ನಮ್ಮ ತಂದೆ ತಾಯಿಗೆ ಮೂರು ಜನ ಹೆಣ್ಣು ಮಕ್ಕಳು ಮೂರು ಜನ ಗಂಡಸು ಮಕ್ಕಳು ನಮ್ಮೆಲ್ಲರ ಹೊಟ್ಟೆ ತುಂಬಿಸಿಕೊಳ್ಳಲು ಹರಸಾಹಸವೇ ಪಡಬೇಕಾಗುತ್ತಿತ್ತು.

**ಉದ್ಯಮ ಶೀಲತಾ ತರಬೇತಿ ನಂತರ:**

ಸರ್ಚ ಸ್ವಯಂ ಸಂಸ್ಥೆ(ರಿ) ಕಮತಗಿ. ನಮ್ಮ ಅಮೀನಗಡ ಗ್ರಾಮದಲ್ಲಿ ಫೆಬ್ರುವರಿ 2011ರಂದು ಉದ್ಯಮ ಶೀಲತಾ ಅಭಿವೃದ್ಧಿಯನ್ನು ಪ್ರಾರಂಭಿಸಿ ಸದರಿ ತರಬೇತಿಯಲ್ಲಿ ಶ್ರೀಮತಿ. ಹಸೀನಾ.ದಾವಲಸಾಬ.ಅತ್ತಾರ. ನಾನು ತರಬೇತಿ ಪಡೆದುಕೊಂಡು ನನ್ನ ಮನೆಯಲ್ಲಿ ಸಿಹಿ ತಿಂಡಿಗಳನ್ನು ತಯಾರಿಸಿ ಬೇರೆ ಬೇರೆ ಅಂಗಡಿಗಳಿಗೆ ಮತ್ತು ಸ್ವೀಟ್ ಮಾರ್ಟ ಅಂಗಡಿಗಳಿಗೆ ಲಾಡು ಮತ್ತು ಪೇಡೆಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದೇನೆ. ಈಗ ನನ್ನ ಕುಟುಂಬದಲ್ಲಿ ಎಲ್ಲಾ ಸದಸ್ಯರು ಈ ಚಟುವಟಿಕೆಯಲ್ಲಿ ಭಾಗವಹಿಸಿ ಪ್ರತಿ ದಿನವು ಇದೇ ಕೆಲಸವನ್ನು ಮಾಡುತ್ತಿದ್ದೇವೆ. ಬೇರೆ ಕೂಲಿ ಕೆಲಸವಾಗಲಿ ಬೇರೆ ಇನ್ನಾವ ಕೆಲಸವಾಗಲಿ ಮಾಡಲು ಹೋಗುವದಿಲ್ಲ. ಈಗ ನಾನು ಯಶಸ್ವಿಯಾಗಿ ಉದ್ಯಮ ಶೀಲಳಾಗಿ ಕೆಲಸ ಮಾಡುತ್ತಿದ್ದೇನೆ. ಸರ್ಚ ಸಂಸ್ಥೆಯವರು ಬರೆ ತರಬೇತಿಯನ್ನು ಕೊಡಿಸಿ ಕೈ ಬಿಡಲಿಲ್ಲ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮುಖಾಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು 20,000 ರೂ.ಗಳು ಸಾಲ ಸೌಲಭ್ಯವನ್ನು ದೊರಕಿಸಿಕೊಟ್ಟರು. ಈ ಹಣವನ್ನು ಬಂಡವಾಳ ಹಾಕಿ ಕಳೆದ 4 ತಿಂಗಳಲ್ಲಿ 1,00,000ಕ್ಕೂ ಮೇಲ್ಪಟ್ಟು ಲೇವಾದೇವಿಯನ್ನು ಮಾಡುತ್ತಿದ್ದೇನೆ. ಈಗ ನಾನು ತುಂಬಾ ಸಂತೋಷವಾಗಿ ಆತ್ಮ ಸ್ಥೈರ್ಯದಿಂದ ನನ್ನ ಈ ಚಟುವಟಿಕೆಯನ್ನು ನಿರಂತರ ಮುಂದುವರೆಸಿಕೊಂಡು ಹೋಗಲು ಆಸಕ್ತಿ ಹೊಂದಿದ್ದೇನೆ. ನನ್ನ ಈ ಯಶಸ್ಸಿಗೆ ಕಾರಣಭೂತರಾಗಿರುವಂತಹ ಸರ್ಚ ಸಂಸ್ಥೆ(ರಿ) ಕಮತಗಿ. ಭಾರತೀಯ ಉದ್ಯಮ ಶೀಲತಾ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಎಕ್ಸಂಚರ್ ಸಂಸ್ಥೆ ಬೆಂಗಳೂರ. ಹಾಗೂ ನಬಾರ್ಡ ಬ್ಯಾಂಕ್ ಇವರಿಗೆ, ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.



Scanned by PDF Scanner

**ಹಿನ್ನೆಲೆ:-**

ಸರ್ಚ್ ಸ್ವಯಂ ಸೇವಾ ಸಂಸ್ಥೆ,(ರಿ)ಕಮತಗಿ ಬಾಗಲಕೋಟ ಜಿಲ್ಲೆ ಸಂಸ್ಥೆಯು ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುವದು. ಈ ಉದ್ದೇಶದಿಂದ, ಉದ್ಯೋಗದ ಅವಕಾಶ ವಂಚಿತರಾಗಿರುವಂತಹ ಬಡ ಯುವಕ ಮತ್ತು ಯುವತಿಯರಿಗೆ ಮತ್ತು ಮಹಿಳೆಯರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತೆ, ಪ್ರೇರೇಪಿಸಲು ಭಾರತೀಯ ಉದ್ಯಮ ಶೀಲತಾ ಅಭಿವೃದ್ಧಿ ಸಂಸ್ಥೆ ಮತ್ತು ಎಕ್ಸಂಚರ್ ಸಂಸ್ಥೆ ಬೆಂಗಳೂರು. ಇವರ ಆರ್ಥಿಕ ಸಹಾಯದಿಂದ 1 ತಿಂಗಳ ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡು, ಸದರಿ ತರಬೇತಿಯಲ್ಲಿ ಉದ್ಯಮ ಶೀಲತಾ ವಿಷಯಗಳು ಮತ್ತು ಮಾರುಕಟ್ಟೆ ಸಮೀಕ್ಷೆ ಹಾಗೂ ಯೋಜನಾ ವರದಿ ತಯಾರಿಸಿಕೊಂಡು ಯಾವ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಂಡು ಉದ್ಯೋಗವನ್ನು ಪ್ರಾರಂಭಿಸಿ ಆದರಿಂದ, ಯಶಸ್ವಿಯಾಗಿ ನಿರ್ವಹಿಸುವದು ಹೇಗೆ ಎಂಬುದನ್ನು ಕಲಿತುಕೊಂಡು ಸಂಪೂರ್ಣವಾಗಿ ಸ್ವಯಂ ಉದ್ಯೋಗಿಯಾಗಿ ಮುಂದುವರೆಯುತ್ತಿರುವ ವ್ಯಕ್ತಿಗಳಿಗೆ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮತ್ತು ಸರ್ಚ ಸಂಸ್ಥೆಯು ಅಕ್ಟೋಬರ್ 2011ರಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಯಿತು. ನಂತರ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮುಖಾಂತರ ಸಾಲ ಸೌಲಭ್ಯ ಪ್ರಾರಂಭಿಸಿದ ನಂತರ, ಸಾಲ ಪಡೆದ ವ್ಯಕ್ತಿಗಳು ತಮ್ಮ ಉದ್ಯೋಗವನ್ನು ಯಶಸ್ವಿಯಾಗಿ ನಡೆಸಿ ಪ್ರತಿಯೊಬ್ಬ ಸದಸ್ಯರು ಆರ್ಥಿಕ ಮಟ್ಟದಲ್ಲಿ ಸುಧಾರಣೆಯಾದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಗಿನಂತಿರುತ್ತದೆ.

## 5ನೇ ಕೇಸ್ ಸ್ಟಡಿ

| | | |
|---|---|---|
| 1) ಸಂಸ್ಥೆಯ ಹೆಸರು | : | ಸರ್ಚ್ ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆ,(ರಿ) ಕಮತಗಿ.ರ |
| 2) ವ್ಯಕ್ತಿಯ ಹೆಸರು ಮತ್ತು ವಿಳಾಸ | : | ರೇಖಾ. ಪಟೇಕಾರ.<br>ವಾರ್ಡ ನಂ.30 ನವನಗರ, ಬಾಗಲಕೋಟ.<br>ಕರ್ನಾಟಕ ರಾಜ್ಯ. |
| 3) ಚಟುವಟಿಕೆ ಪ್ರಾರಂಭಿಸಿದ ದಿನಾಂಕ | : | 05/01/2011 |
| 4) ಚಟುವಟಿಕೆ | : | ರೊಟ್ಟಿ, ಚಟ್ನಿ ತಯಾರಿಸಿ ಮಾರಾಟ ಮಾಡುವದು. |
| 4) ನಬಾರ್ಡನಿಂದ ಪಡೆದ ಸಾಲ | : | 25,000/- |
| 5) ಸಾಲ ಪಡೆದ ದಿನಾಂಕ | : | 02/01/2011 |
| 6) ಕಚ್ಚಾ ವಸ್ತುಗಳ ಖರೀದಿ ಬೆಲೆ | : | 25,000/- |
| 7) ಮಾರಾಟ ಬೆಲೆ | : | ಮಾಸಿಕ 10,000/- |
| 8) 7 ತಿಂಗಳಿಗೆ ಲಾಭ | : | 70,000/- |

**ಮೊದಲಿನ ಸ್ಥಿತಿ:**

ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು. ಪ್ರತಿ ದಿನ ಕೂಲಿ ಕೆಲಸ ದೊರಕುತ್ತಿರಲಿಲ್ಲ. ಸಾಲದ ಆವಶ್ಯಕತೆ ಆದಾಗ ಬಡ್ಡಿಯಂತೆ, ಬೇರೆ ಕಡೆ ಸಾಲ ಪಡೆದು ಜೀವನ ಸಾಗಿಸುತ್ತಿದ್ದರು. ಇದರಿಂದಾಗಿ ಕುಟುಂಬದಲ್ಲಿ ಆರ್ಥಿಕವಾಗಿ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದರು. ಹೊರಗಡೆ ಕೂಲಿ ಕೆಲಸ ಕೂಡ ಪ್ರತಿ ದಿನ ಇರುವದಿಲ್ಲ ವಾರದಲ್ಲಿ 2 ರಿಂದ 3 ದಿನಗಳವರೆಗೆ ಮಾತ್ರ ಕೆಲಸ ಸಿಗುತ್ತಿತ್ತು. ನಮ್ಮ ಮನೆಯಲ್ಲಿ ಗಂಡ ಮಕ್ಕಳು ನಾವೆಲ್ಲರೂ ದುಡಿಯಲಿದ್ದರೆ ಗತಿ ಇರುವದಿಲ್ಲ. ಹೊಟ್ಟೆಗೆ ಹಿಟ್ಟು ಇರುವದಿಲ್ಲ. ಪ್ರತಿ ದಿನ ದುಡಿದು ಬದುಕಲು ಹರಸಾಹಸವೇ ಪಡಬೇಕಾಗುತ್ತಿತ್ತು.

**ಉದ್ಯಮ ಶೀಲತಾ ತರಬೇತಿ ನಂತರ:**

ಸರ್ಚ ಸ್ವಯಂ ಸಂಸ್ಥೆ(ರಿ) ಕಮತಗಿ. ನಮ್ಮ ನವನಗರ, ಬಾಲಕೋಟ ಗ್ರಾಮದಲ್ಲಿ ಜನವರಿ 2011ರಂದು ಉದ್ಯಮ ಶೀಲತಾ ಅಭಿವೃದ್ಧಿಯನ್ನು ಪ್ರಾರಂಭಿಸಿ ಸದರಿ ತರಬೇತಿಯಲ್ಲಿ ಶ್ರೀಮತಿ. ರೇಖಾ. ಪಟೇಕಾರ. ನಾನು ತರಬೇತಿ ಪಡೆದುಕೊಂಡು ನನ್ನ ಮನೆಯಲ್ಲಿ ರೊಟ್ಟಿ ಮತ್ತು ಚಟ್ನಿ ತಯಾರಿಸುವ ಕೆಲಸ ಪ್ರಾರಂಭಿಸಿರುತ್ತೇನೆ. ನಾನು ಬಡತನ ಪರಿಸ್ಥಿತಿಯಲ್ಲಿರುವದರಿಂದ, ಯಾವುದಾದರೂ ಒಂದು ಉದ್ಯೋಗ ಪ್ರಾರಂಭಿಸುವ ಆಸಕ್ತಿಯಿತ್ತು. ಆದರೆ, ಸ್ವಂತ ಬಂಡವಾಳದ ಕೊರತೆಯಿತ್ತು. ಈಗ ನಾನು ಸ್ವಂತ ಬಂಡವಾಳ ಹಾಕಿ ರೊಟ್ಟಿ ಮತ್ತು ಚಟ್ನಿ ತಯಾರಿಸಿ ಬೇರೆ ಬೇರೆ ಅಂಗಡಿಗಳಿಗೆ ಮತ್ತು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದೇನೆ. ಇದರಲ್ಲಿ ನನಗೆ ಲಾಭ ದೊರೆಯುತ್ತದೆ. ಈಗ ನನ್ನ ಕುಟುಂಬದಲ್ಲಿ ಉತ್ತಮ ರೀತಿಯಲ್ಲಿ ಬದುಕಲು ಸಹಾಯವಾಗಿರುತ್ತದೆ. ಕುಟುಂಬದ ಸದಸ್ಯರು ಕೂಡ ಈ ಚಟುವಟಿಕೆಯಲ್ಲಿ ಭಾಗವಹಿಸಿ ಪ್ರತಿ ದಿನವು ಇದೇ ಕೆಲಸವನ್ನು ಮಾಡುತ್ತಿದ್ದೇವೆ. ಬೇರೆ ಕೂಲಿ ಕೆಲಸವಾಗಲಿ ಬೇರೆ ಇನ್ನಾವ ಕೆಲಸವಾಗಲಿ ಮಾಡಲು ಹೋಗುವದಿಲ್ಲ. ಈಗ ನಾನು ಯಶಸ್ವಿಯಾಗಿ ಉದ್ಯಮ ಶೀಲಳಾಗಿ ಕೆಲಸ ಮಾಡುತ್ತಿದ್ದೇನೆ. ಸರ್ಚ ಸಂಸ್ಥೆಯವರು ಬರೆ ತರಬೇತಿಯನ್ನು ಕೊಡಿಸಿ ಕೈ ಬಿಡಲಿಲ್ಲ ನಬಾರ್ಡ ಹಣಕಾಸು ಸೇವಾ ಸಂಸ್ಥೆ ಮುಖಾಂತರ ಸ್ವಯಂ ಉದ್ಯೋಗ ಪ್ರಾರಂಭಿಸಲು 25,000 ರೂ.ಗಳು ಸಾಲ ಸೌಲಭ್ಯವನ್ನು ದೊರಕಿಸಿಕೊಟ್ಟರು. ಈ ಹಣವನ್ನು ಬಂಡವಾಳ ಹಾಕಿ ಕಳೆದ 7 ತಿಂಗಳಲ್ಲಿ 70,000ಕ್ಕೂ ಮೇಲ್ಪಟ್ಟು ಲೇವಾದೇವಿಯನ್ನು ಮಾಡುತ್ತಿದ್ದೇನೆ. ಈಗ ನಾನು ತುಂಬಾ ಸಂತೋಷವಾಗಿ ಆತ್ಮ ಸ್ಥೈರ್ಯದಿಂದ ನನ್ನ ಈ ಚಟುವಟಿಕೆಯನ್ನು ನಿರಂತರ ಮುಂದುವರೆಸಿಕೊಂಡು ಹೋಗಲು ಆಸಕ್ತಿ ಹೊಂದಿದ್ದೇನೆ. ನನ್ನ ಈ ಯಶಸ್ವಿಗೆ ಕಾರಣಭೂತರಾಗಿರುವಂತಹ ಸರ್ಚ ಸಂಸ್ಥೆ(ರಿ) ಕಮತಗಿ. ಭಾರತೀಯ ಉದ್ಯಮ ಶೀಲತಾ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಎಕ್ಸಂಚರ್ ಸಂಸ್ಥೆ ಬೆಂಗಳೂರ. ಹಾಗೂ ನಬಾರ್ಡ ಬ್ಯಾಂಕ್ ಇವರಿಗೆ, ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.



Scanned by PDF Scanner



# PRESENT DONOR LIST

| Sr No. | Program Name | Partner Organziation |
|---|---|---|
| 1 | Adoption Program | ICPS Under women and child Department |
| 2 | School Children Eye Screen Program | Essilor vision Foundation |
| 3 | Day care center | Women and child Department |
| 4 | Community Envolvement Program | Gunj Organization |
| 5 | Small Farmers Development Program | Bayer Preyas Association Benglore |
| 6 | BIO Gas Project | Sistma BIO Company |
| 7 | Desible Lovlyhood Pragrame | Indual Donors |



Scanned by PDF Scanner

# ಸರ್ಜ ಸ್ವಯಂ ಸೇವ ಅಭಿವೃದ್ಧಿ ಸಂಸ್ಥೆ (ರಿ) ಬಾಗಲಕೋಟೆ
## ೨೦೨೧-೨೨ ನೇ ಸಾಲಿನ ಕಾರ್ಯಕಾರಿ ಮಂಡಳಿಯ ಸದಸ್ಯರ ಯಾದಿ

| ಅ.ಸಂ | ಹೇಸರು ಮತ್ತು ವಿಳಾಸ | ಉದ್ಯೋಗ | ಹುದ್ದೆ | |
|---|---|---|---|---|
| 1 | ಶ್ರೀ ಉಮಾರಾಮ ವಿ ಜೇರೆ<br>ಸಾ//ಗದ್ದನಕೇರಿ, ಬಾಗಲಕೋಟೆ | ನಿವೃತ್ತ ಬ್ಯಾಂಕ ನೌಕರರು | ಅಧ್ಯಕ್ಷರು |  |
| 2 | ಶ್ರೀ ಡಾ॥ ಮಹಾದೇವ ದೀಕ್ಷಿತ<br>ಸಾ// ವಿದ್ಯಾಗಿರಿ ಬಾಗಲಕೋಟೆ | ನಿವೃತ್ತ ಉಪನ್ಯಾಸಕರು | ಉಪಾಧ್ಯಕ್ಷರು |  |
| 3 | ಶ್ರೀ ಎಮ್ ವೆಂಕಟೇಶ<br>ಸಾ// ನವನಗರ ಬಾಗಲಕೋಟೆ | ಸಮಾಜ ಕಾರ್ಯ | ಕಾರ್ಯದರ್ಶಿ/<br>ನಿರ್ದೇಶಕರು |  |
| 4 | ಶ್ರೀ ಶ್ರೀಧರ ದಾಸ<br>ಸಾ// ವಿದ್ಯಾಗಿರಿ ಬಾಗಲಕೋಟೆ | ವಕೀಲರು<br>ಆಯ್. ಇ. ಸಿ | ಖಜಾಂಚಿ<br>ಸದಸ್ಯರು |  |
| 5 | ಶ್ರೀಮತಿ ಡಾ॥ ಮಂಜುಳಾ ವಾಯ್<br>ಜೋಶಿ ಸಾ॥ ನವನಗರ ಬಾಗಲಕೋಟೆ | ಅಟಲ್ ಭೊಜಲ<br>ಯೊಜನೆ | ಸದಸ್ಯರು |  |
| 6 | ಶ್ರೀಮತಿ ಅನುಷಾ ಪಿ ಮಸುದಿ<br>ಸಾ// ನವನಗರ ಬಾಗಲಕೋಟೆ | ಉಪನ್ಯಾಸಕರು | ಸದಸ್ಯರು |  |
| 7 | ಶ್ರೀಮತಿ ಸುಜಾತಾ ಅ ಕೋರಿ<br>ಸಾ//ವಿನಾಯಕ ನಗರ ಬಾಗಲಕೋಟೆ | ವಕೀಲರು | ಸದಸ್ಯರು |  |
| 8 | ಶ್ರೀ ಕೇಶವ ಕಂದಕೂರ<br>ಸಾ//ಕೆರೂರ, ಬದಾಮಿ | ಸಮಾಜ ಕಾರ್ಯ | ಸದಸ್ಯರು |  |
| 9 | ಶ್ರೀ ಶಶಿಧರ ಕಡಕೋಳಮಠ<br>ಸಾ// ಬಾಗಲಕೋಟೆ | ವಕೀಲರು | ಸದಸ್ಯರು |  |
| 10 | ಶ್ರೀ. ಬ್ರೆನ್ಸ್ಟೋನ್ ಪ್ರೇರೆಯ್ರ<br>ಸಾ// ಬೆಂಗಳೂರ | ಸಮಾಜ ಕಾರ್ಯ | ಸದಸ್ಯರು |  |



Scanned by PDF Scanner





Scanned by PDF Scanner















Scanned by PDF Scanner